॥ಶ್ರೀ:॥

ಶ್ರೀ ವೆಂಕಟೇಶಾಯ ನಮಃ

ಯಕ್ಷಗಾನ

ಸೌದಾಸ ಚರಿತ್ರೆ

ಲೇಖಕ:
ಪದ್ಯಾಣ ವೆಂಕಟೇಶ್ವರ ಭಟ್ಟ
ಶಿರೋಮಣಿ, ಪ್ರವೀಣ, ಪ್ರಚಾರಕ
ಕನ್ಯಾನ

೧೯೫೪

ಪ್ರಕಾಶಕರು : ಯಕ್ಷಗಾನ ಕಾರ್ಯಾಲಯ, ಕುಮಟಾ

ಪುಸ್ತಕ ದೊರೆಯುವ ಸ್ಥಳ

ಪದ್ಯಾಣ ವೆಂಕಟೇಶ್ವರ ಭಟ್ಟ, ಪುತ್ತೂರು ತಾಲೂಕ; ಕನ್ಯಾನ (ದ. ಕ.)
ಸಂಪಾದಕರು 'ಯಕ್ಷಗಾನ' ಕಾರ್ಯಾಲಯ, ಕುಮಟಾ (ಉ. ಕ.)
ಪಕೀರ ಸೆಟ್ಟರು, ಜವಳಿ ವ್ಯಾಪಾರಿ, ಪುತ್ತೂರು ತಾಲೂಕ; ಕನ್ಯಾನ (ದ. ಕ.)
ದಕ್ಷಿಣ ಕನ್ನಡದ ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುತ್ತವೆ

॥ಶ್ರೀಃ॥

ಶ್ರೀ ವೆಂಕಟೇಶಾಯ ನಮಃ

ಶ್ರೀಮದ್ಭಾಗವತ ಪುರಾಣದೊಳಗಣ

ಯಕ್ಷಗಾನ

ಸೌದಾಸ ಚರಿತ್ರೆ

ಲೇಖಕ:
ಪದ್ಯಾಣ ವೆಂಕಟೇಶ್ವರ ಭಟ್ಟ
ಶಿರೋಮಣಿ, ಪ್ರವೀಣ, ಪ್ರಚಾರಕ
ಕನ್ಯಾನ

೧೯೫೮

ಬೆಲೆ ೦-೧೦-೦ (೦.೬೨)

ಅರ್ಪಣೆ

ಕರ್ಣಾಟಕ ಸಾಹಿತ್ಯಸರಸ್ವತಿಯ
ಚರಣಸರೋಜಗಳಲ್ಲಿ—

ಮುದ್ರಣ:
ಉ. ಕ. ಜಿಲ್ಹಾ ಸಹಕಾರಿ ಮುದ್ರಣ
ಸಂಘ, ನಿಯಮಿತ, ಕುಮಟಾ

ಪ್ರಕಾಶನ:
ಯಕ್ಷಗಾನ ಕಾರ್ಯಾಲಯ
ಕುಮಟಾ

ಮುನ್ನುಡಿ

ಹೃದಯದ ಹಸಿವನ್ನು ತಣಿಸಲು ಕಲೆಯಂತೆ ಸುಧಾರವೂ ಪೋಷಕವೂ ಆದ ಆಹಾರ ಇನ್ನೊಂದಿಲ್ಲ. ಎಲ್ಲರೂ ಅದನ್ನು ಅನುಭವಿಸಬಲ್ಲರು. ಬಲ್ಲರು ಎಂದ ಮಾತ್ರಕ್ಕೆ ಎಲ್ಲರೂ ಈ ಬಲ್ಲನಿಕೆಯನ್ನು ಉಪಯೋಗಿಸಿಕೊಳ್ಳುತ್ತಾರೆ ಎಂದು ಭಾವಿಸಬಾರದು. ಅದಕ್ಕೆ ಯೋಗ್ಯ ಆವರಣ, ಶಿಕ್ಷಣಗಳು ಬೇಕು. ಇಲ್ಲವಾದರೆ ಕಲಾನುಭವಶಕ್ತಿಯು ಮಂದವಾಗಿ ನಶಿಸಬಹುದು. ಅಂತಹ ವ್ಯಕ್ತಿಗಳಿಗೆ ಕಲೆಯೆಂಬುದೊಂದು 'ಭ್ರಾಂತಿ'ಯಾಗಿ ತೋರುತ್ತದೆ. ಅವರನ್ನೆ ದಾರ್ಶನಿಕ ಸಾಹಿತಿಯಾದ ಮ್ಯಾಥ್ಯೂ ಆರ್ನಾಲ್ಡನು ಅಸಂಸ್ಕೃತರು (Barbarians), ಅರಸಿಕರು (Philistines) ಎಂದು ಕರೆದಿದ್ದಾನೆ.

ಆದರೆ ನಿಜವಾದ ಪ್ರತಿಭೆ ಮಾತ್ರ ಎಲ್ಲ ಅಡೆತಡೆಗಳನ್ನು ಮೀರಿ ಹೊರ ಹೊಮ್ಮುವುದು. ಎಲ್ಲರಲ್ಲೂ ಸೃಷ್ಟ್ಯಾತ್ಮಕ ಪ್ರತಿಭೆ ಕಂಡುಬರದು. ಶಿಕ್ಷಣವು ಅದರ ವಿಕಾಸಕ್ಕೆ ಸಹಾಯಕ ಮಾತ್ರ; ಕಾರಕವಲ್ಲ. ನಿಸರ್ಗಪ್ರಾಪ್ತವಾಗಿಯೆ ಸಂಜನಿಸುವ ಕಲಾಪ್ರತಿಭೆಯು ಆಯಾ ಪ್ರದೇಶದ ಜನಜೀವನಕ್ಕೆ ವಿಶಿಷ್ಟವಾದ ರೂಪದಲ್ಲಿಯೆ ವ್ಯಕ್ತವಾಗಬೇಕು. ಹಾಗಾದರೆ ಮಾತ್ರ ಅದು ಸಹಜ; ಇಲ್ಲವಾದರೆ ಕೃತಕ. ನಮ್ಮ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಯಕ್ಷಗಾನವನ್ನೆ ಗೆಳೆಯ ಶ್ರೀ ಪದ್ಯಾಣ ವೆಂಕಟೇಶ್ವರ ಭಟ್ಟರು ತಮ್ಮ ಹೃದಯಾನುಭವದ ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ಯಕ್ಷಗಾನ ಸಾಹಿತ್ಯದ ಪಾತ್ರೆಯಲ್ಲಿ ಕಲಾಹೃದಯದ ಕಾವ್ಯರಸವನ್ನು ಮೊಗೆದು ರಸಿಕ ಮಹಾಜನರ ಮುಂದೆ ಸುರಿದಿದ್ದಾರೆ.

ಯಕ್ಷಗಾನ ಕಲೆಯ ಚಿನ್ನದಯುಗ ಕಳೆಯಿತೆಂದು ಮರುಗುವವರು ಕೆಲವರು; ಇದೀಗ ಸುಧಾರಣೆಯ ಶಿಖರದಲ್ಲಿದ್ದೇವೆಂದು ಮೆರೆಯುವವರು ಕೆಲವರು. ಆದರೆ ಒಂದು ಮಾತು ನಿಜ. ಹಿಂದೆಯೂ ದೋಷಗಳಿದ್ದುವು. ಇಂದೂ ಇವೆ. ಹಿಂದಿನವು ಒಂದು ತೆರನಾದರೆ ಇಂದಿನವು ಇನ್ನೊಂದು ತೆರ. ಇಡಿಯ ಲೋಕದಲ್ಲಿ ನಿರಂತರವಾಗಿ ಘಟಿಸುತ್ತಿರುವ ಪರಿವರ್ತನೆಗೆ ಯಕ್ಷಗಾನ ಅಪವಾದವಲ್ಲ. ಆದರೆ ಬದಲಾವಣೆಯ ಎಳೆದಾಟದಲ್ಲಿ ಕಲೆಯ ಮೂಲಸೂತ್ರವೆ ಕಡಿದು ಹೋಗಬಾರದು. ಹಾಡುಗಾರಿಕೆಯ ಕ್ರಮವಾಗಲಿ, ಬಯಲಾಟದ

ವೇಷಭೂಷಣ — ರಂಗಸಜ್ಜಿಕೆಗಳಾಗಲಿ, ತಾಳಮದ್ದಳೆಯ ಅರ್ಥಗಾರಿಕೆಯಾಗಲಿ ಸುಧಾರಣೆಯ ಹೆಸರಿನಲ್ಲಿ ಕಂಡ ದಾರಿ ಹಿಡಿದು ಕಲೆಯ ಆತ್ಮವನ್ನೆ ಕಳೆದುಕೊಳ್ಳಲು ಸಾಧ್ಯ. ಹೀಗಾಗಬಾರದು ಎಂದು ಕಲೆಯ ಅಭಿಮಾನಿಗಳು, ಕಲೆಯ ವ್ಯಾಸಂಗದಲ್ಲಿ ಬದುಕನ್ನೆ ವಿನಿಯೋಗಿಸಿದವರು ಹೇಳುತ್ತಾರೆ. ಕಲಾವಿದರು ಯಕ್ಷಗಾನದ ನಿಜವಾದ ಸ್ವರೂಪ, ಇತಿಮಿತಿಗಳನ್ನು ಅರಿತುಕೊಳ್ಳಬೇಕು. ಶುದ್ಧವಾದ ವಿಮರ್ಶೆಯನ್ನು ಸ್ವಾಗತಿಸಬೇಕು. (ಯಕ್ಷಗಾನ ಕಲಾವಿದರಲ್ಲಿ ಅತ್ಯಪೂರ್ವ ಗುಣವಿದು!) ತಮ್ಮನ್ನೆ ತಾವು ನಿರೀಕ್ಷಿಸಿಕೊಳ್ಳಬೇಕು. ಕಲಾವಿದರು ಮಾತ್ರ ತಿಳಿದರೆ ಸಾಲದು. ಕಲಾಭಿಮಾನಿಗಳು ಕೂಡ ಕಣ್ದೆರೆಯಬೇಕು. ಕಲೆಯ ಉನ್ನತಿಗೆ ಅಭಿಮಾನವೊಂದೆ ಸಾಲದು. ರಸಿಕ ಜನತೆಯ ರುಚಿಯ ಮಟ್ಟವೆ ಉನ್ನತವಾಗಬೇಕು. ಕಲೆ ಬದುಕಬೇಕಾದರೆ ಇದೊಂದೆ ದಾರಿ. ಇಂತಹ ಮನೋಧರ್ಮ ಜನತೆಯಲ್ಲಿ ವಿಕಾಸಹೊಂದಿದರೆ ಸರಕಾರಗಳ ಸಹಾಯವಿಲ್ಲದಿದ್ದರೂ ಕಲೆ ಸಜೀವವಾಗಬಹುದು. ಆದರೆ ಜನತೆಯ ಮನೋಧರ್ಮವೆ ಸ್ವಚ್ಛವಾಗಿಲ್ಲದಿದ್ದರೆ ಸರಕಾರದ ನೆರವಿನಿಂದಲೂ ಫಲ ದೊರೆಯದು.

ಯಕ್ಷಗಾನದ ಸಾಹಿತ್ಯಕ್ಕೆ ಪ್ರಸಂಗಗಳೆ ಆಧಾರ. ಪ್ರಸಂಗರಚನೆಯ ವಿನ್ಯಾಸವೂ ಹಲವು ಬದಲಾವಣೆಗಳನ್ನು ಕಂಡಿದೆ. ಪಾರ್ತಿಸುಬ್ಬನ ಪ್ರಸಂಗಗಳಲ್ಲಿನ ಸರಳಸೌಂದರ್ಯ ಕಾಲಕ್ರಮದಲ್ಲಿ ಮರೆಯಾಯಿತು. ಶಬ್ದ-ಪ್ರಾಸಗಳ ಡೊಂಬರಾಟಕ್ಕೇ ಜನರು ಮನಸೋತ ಕಾಲವೊಂದಿತ್ತು. ಆದರೆ ಜನತೆಯ ಕಲೆಯಾದ ಯಕ್ಷಗಾನಕ್ಕೆ, ಅರ್ಥವಾಗದ ಪದಪ್ರೌಢಿಮೆಯ ಕಸರತ್ತು ಸಲ್ಲದು ಎಂಬ ತಿಳಿವಳಿಕೆ ಈಗ ಮೂಡುತ್ತಿದೆ. ಸಲ್ಲಕ್ಷಣವಿದು. 'ಸೌದಾಸ ಚರಿತ್ರೆ'ಯಲ್ಲಿ ಈ ತಿಳಿವಳಿಕೆ ರೂಪುಗೊಂಡಿದೆ. ಶ್ರೀ ವೆಂಕಟೇಶ್ವರ ಭಟ್ಟರ ಭಾಷಾಪಾಂಡಿತ್ಯ ಕೃತಿಯ ಸರಳತೆಗೆ ಪ್ರತಿಬಂಧಕವಾಗಿಲ್ಲ. ಸುಲಭಗ್ರಾಹ್ಯವಾದ ಲಲಿತಶೈಲಿಯೊಂದಿಗೆ ಗಂಭೀರವಾದ ಅಲಂಕಾರಗಳನ್ನು ಮಿತವಾಗಿ ಹೆಣೆದಿದ್ದಾರೆ. ಇದು ಶ್ರೀಯುತರ ಮೊದಲ ಕೃತಿ. ಅವರು ಇನ್ನೂ ಹೆಚ್ಚಿನ ಯಶಸ್ಸನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ಮಂಗಳೂರು
೬-೨-೧೯೫೮

ಎಂ. ಮಹಾಬಲ ಭಟ್ಟ
ಬಿ. ಎಸ್‌ಸಿ., ಎಲ್‌ಎಲ್. ಬಿ.

ಬಿನ್ನಹ

ಕಲೆಗಳಲ್ಲಿ ಪ್ರಧಾನಗಳಾಗಿರುವ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಗಳು ವ್ಯಸ್ತವಾಗಿಯೂ ತಮ್ಮ ಅಲೌಕಿಕ ಸೌಂದರ್ಯದಿಂದ ಸಹೃದಯ ಹೃದಯವನ್ನು ಸೆರೆಹಿಡಿಯಲು ಸಮರ್ಥಗಳಾಗಿವೆ. ಯಕ್ಷಗಾನ ಕಲೆಯು ಹಳ್ಳಿಗರಲ್ಲಿ ಆವಿರ್ಭೂತವಾಗಿ ಅಭಿವರ್ಧಿಸಿ ಜಾನಪದ ಕಲೆಯೆನಿಸಿದರೂ ಸಂಗೀತ, ಸಾಹಿತ್ಯ, ನೃತ್ಯ ಮತ್ತು ಚಿತ್ರ — ಈ ನಾಲ್ಕೂ ಕಲೆಗಳ ಸುಂದರ ಸಾಮರಸ್ಯದಿಂದ ರಸಿಕಜನ ಚಿತ್ತಾಕರ್ಷಕವಾಗಿರುವ ರಸಾತ್ಮಕ ಶಕ್ತಿಯನ್ನು ಪಡೆದು ಎಳೆಯರಿಂದ ಹಳೆಯರ ವರೆಗೂ, ಪಾಮರರಿಂದ ಪಂಡಿತರ ವರೆಗೂ, ಸೇವಕರಿಂದ ಅಧಿಕಾರಿಗಳ ವರೆಗೂ ತಾತ್ತ್ವಿಕವಾದ ಆನಂದವನ್ನು ನೀಡಿ ಮನ್ನಣೆಯನ್ನು ಗಳಿಸುತ್ತಲಿದೆ. ಆನಂದೋತ್ಪಾದನೆಯೇ ಕಲೆಯ ಪ್ರಧಾನ ಉದ್ದೇಶವಾದರೂ ಶ್ರೇಷ್ಠ ಕಲಾಕಾರನ ಕಲಾಕೃತಿಯಲ್ಲಿ ದುರ್ನೀತಿ ನಿರಸನಪೂರ್ವಕವಾದ ಸನ್ಮಾರ್ಗದರ್ಶನಪೂರ್ವಕವಾದ ಸನ್ಮಾರ್ಗದರ್ಶನವಿರುವುದಲ್ಲದೆ ಜನಜೀವನ ಪರಿಷ್ಕಾರವಾದ ಧಾರ್ಮಿಕ ವಿಚಾರಗಳು ಅವ್ಯಕ್ತವಾಗಿ ಸನ್ನಿಹಿತಗಳಾಗಿರುತ್ತವೆ. ಕಲೆಯ ನೆಲೆಯಲ್ಲಿ ದ್ವೇಷ, ಮಾತ್ಸರ್ಯ, ದಂಭ, ದುರಹಂಕಾರ, ಭೇದ, ವೈಷಮ್ಯಗಳು ಕಂಡುಬಂದರೂ, ಅವು ಕಲಾಜನ್ಯವಲ್ಲ. ವ್ಯಕ್ತಿನಿಷ್ಠ ದೋಷಬೀಜಗಳೇ ಅವುಗಳಿಗೆ ಮೂಲವಾಗಿವೆ. ಪರೋಪದೇಶವು ಜೀವನಪ್ರೇರಿತವಾದರೆ ಜನತೆಯ ಮೇಲೆ ಆಗುವ ಪರಿಣಾಮವು ಅಷ್ಟಿಷ್ಟಲ್ಲ. ಯಕ್ಷಗಾನ ಕಲೆಯಲ್ಲಿರುವ ಹಿರಿದಾದ ಗುಣಗಳು ನನ್ನ ಮನಸ್ಸನ್ನಾಕರ್ಷಿಸಿ ಅದರಲ್ಲಿ ಆಸಕ್ತಿಯನ್ನುಂಟುಮಾಡಿದುದರ ಪರಿಣಾಮವಾಗಿ ವಾಗ್ದೇವಿಯ ಅನುಗ್ರಹದಿಂದ ನನ್ನ ಅಲ್ಪಬುದ್ಧಿಗೆ ತೋರಿದಂತೆ ಈ ಚಿಕ್ಕ ಯಕ್ಷಗಾನ ಕೃತಿಯನ್ನು ನಿರ್ಮಿಸಿ, ಕರ್ಣಾಟಕ ಸಾಹಿತ್ಯಸರಸ್ವತಿಯ ಚರಣಸರೋಜಗಳಲ್ಲಿ ಭಕ್ತಿಯಿಂದ ಸಮರ್ಪಿಸಿದ್ದೇನೆ. ಇದಕ್ಕೆ ಶ್ರೀಮದ್ಭಾಗವತದ ನವಮ-ಸ್ಕಂಧದ ಒಂಬತ್ತನೆಯ ಸಂಧಿಯಿಂದ ವಸ್ತುವನ್ನು ಆರಿಸಿಕೊಂಡರೂ ಮೂಲಕ್ಕೆ ಚ್ಯುತಿ ಬಾರದಂತೆ, ಪಾತ್ರಗಳ ಯೋಗ್ಯತೆಯು ವಿಸ್ಫುತವಾಗುವಂತೆ, ಸರಸತೆಯು ಮೈಗೂಡುವಂತೆ ಕಾವ್ಯಧರ್ಮವನ್ನನುಸರಿಸಿ ಕಥಾತಂತ್ರದಲ್ಲಿ ಸ್ವತಂತ್ರತೆಯನ್ನವಲಂಬಿಸಿ ಅಲ್ಪಸ್ವಲ್ಪ ಪರಿವರ್ತನೆಯು ಮಾಡ

ಲ್ಪಟ್ಟಿದೆ. ನದಿಗಳ ಹೆಸರು ಮತ್ತು ಸ್ವಪ್ನವೃತ್ತಾಂತವನ್ನು ಬೃಹನ್ನಾರದೀಯ ಪುರಾಣದಿಂದ ತೆಗೆದುಕೊಂಡಿದ್ದೇನೆ. ತನಗೆ ಗೊತ್ತಿಲ್ಲದೆಯಾದರೂ ಗುರುವಿನಲ್ಲಿ ತೋರಿಸಿದ ಅನಾದರ ಭಾವದಿಂದೊದಗುವ ವಿಪತ್ತು, ಪರನಾರೀ ವ್ಯಾಮೋಹದಿಂದುಂಟಾಗುವ ದುರ್ಗತಿ, ಸಹನಶೀಲತೆಯ ಪರಿಣಾಮ ರಮಣೀಯತೆ, ಪಾತಿವ್ರತ್ಯದ ಪ್ರಭಾವ — ಮುಂತಾದವುಗಳು 'ಸೌದಾಸ ಚರಿತ್ರೆ'ಯಲ್ಲಿ ಪ್ರತಿಪಾದಿತಗಳಾಗಿವೆ.

ಇದನ್ನು ನಿರ್ಮಿಸುವಾಗ ದೋಷನಿವಾರಣೆಗೆ ಸಾಧಕವಾಗಿರುವ ಹಲವಾರು ಹಿತಸೂಚನೆಗಳನ್ನು ನೀಡಿದ ಅಂತರಂಗದ ಮಿತ್ರರನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ. ಯಕ್ಷಗಾನ ನಟವರೇಣ್ಯರಾದ ಶ್ರೀ ಕುರಿಯ ವಿಠಲಶಾಸ್ತ್ರಿಗಳೊಂದಿಗೆ ಬೆಂಗಳೂರಿಗೆ ತೆರಳಿ, ರಷ್ಯದ ಪ್ರಧಾನಿಗಳಾದ ಬುಲ್ಗಾನಿನ್ ಮತ್ತು ಮಿ॥ ನಿಕಿಟಾ ಕ್ರುಶ್ಚೇವರ ಸಮ್ಮುಖದಲ್ಲಿ ಪ್ರದರ್ಶಿತವಾದ ಯಕ್ಷಗಾನ ಆಟದಲ್ಲಿ ಹಾಡುಗಾರರಾಗಿ ಜನರ ಮೆಚ್ಚುಗೆಗೆ ಪಾತ್ರರಾಗಿ ಯಶಸ್ಸನ್ನು ಗಳಿಸಿದ ಶ್ರೀ ಪದ್ಯಾಣ ಪುಟ್ಟುನಾರಾಯಣ ಭಾಗವತ ಅವರು ರಾಗ ಮತ್ತು ತಾಳಕ್ಕೆ ಸಂಬಂಧಿಸಿದ ತಪ್ಪುಗಳನ್ನು ತಿಳಿಯಪಡಿಸಿ ತಿದ್ದಿಸಿದ್ದಕ್ಕಾಗಿ ಅವರಿಗೂ, ವ್ಯಾಕರಣ ಮತ್ತು ಛಂದಸ್ಸಂಬಂಧಿ ಸ್ಖಾಲಿತ್ಯಗಳನ್ನು ಸರಿಪಡಿಸಿದ ಶ್ರೀ ಎಸ್. ತಿರುಮಲೇಶ್ವರ ಭಟ್ಟ, 'ವಿದ್ವಾನ್', 'ಶಿರೋಮಣಿ', ಕನ್ನಡ ಪಂಡಿತರು, ಮಿಲಾಗ್ರಿಸ್ ಹೈಸ್ಕೂಲ್, ಮಂಗಳೂರು ಅವರಿಗೂ ನನ್ನ ಹಾರ್ದಿಕ ವಂದನೆಗಳು. ಈ ಪ್ರಸಂಗರಚಿಸಿದ ವಿಷಯವನ್ನು ಕರ್ಣಾಕರ್ಣಿಕವಾಗಿ ತಿಳಿದು, ಆಟವಾಡಲು ಇದನ್ನು ತಾವಾಗಿಯೇ ಕೇಳಿದ ಮೂಲ್ಕಿ ಮೇಳದ ವಿದೂಷಕರಾದ ಶ್ರೀ ಪದ್ಯಾಣ ನಾರಾಯಣ ಭಟ್ಟರಿಗೂ, ಬಾಯಾರಿನಲ್ಲಿ ಎಸ್. ತಿರುಮಲೇಶ್ವರ ಭಟ್ಟ, 'ವಿದ್ವಾನ್', ಮಂಗಳೂರು ಇವರ ದಿವ್ಯಹಸ್ತದಿಂದ ಈ ಪ್ರಸಂಗದ ಪ್ರದರ್ಶನೋದ್ಘಾಟನವನ್ನು ಮಾಡಿಸಿದ ಮೂಲ್ಕಿ ಶ್ರೀ ವೆಂಕಟರಮಣ ಕೃಪಾಪೋಷಿತ ಯಕ್ಷಗಾನ ಮಂಡಳಿಯ ವ್ಯವಸ್ಥಾಪಕರಾದ ಪದ್ಯಾಣ ಕೃಷ್ಣಭಟ್ಟರಿಗೂ, ಉತ್ಸಾಹದಿಂದ ಆಡಿ ತೋರಿಸಿದ ನಟರಿಗೂ, ಹಿಮ್ಮೇಳದವರಿಗೂ ನಾನು ಅತ್ಯಂತ ಕೃಜ್ಞನಾಗಿದ್ದೇನೆ. ಕೇಳಿಕೊಂಡ ಕೂಡಲೇ ನನ್ನ ಮೇಲಣ ಪ್ರೀತಿಯಿಂದ ಶೀಘ್ರದಲ್ಲಿಯೇ ಈ ಪ್ರಸಂಗಕ್ಕೆ ಮುನ್ನುಡಿ ಬರೆದು ಕೊಟ್ಟು ಪ್ರೋತ್ಸಾಹಿಸಿದ ಪ್ರಖ್ಯಾತ ಅರ್ಥ

ವಾದಿಗಳಾದ ಶ್ರೀ ಮುಳಿಯ ಮಹಾಬಲ ಭಟ್ಟ, ಬಿ.ಎಸ್ ಸಿ., ಎಲ್ ಎಲ್.ಬಿ. ಎಡ್ವೋಕೇಟ್, ಮಂಗಳೂರು ಅವರಿಗೆ ನನ್ನ ಮನಃಪೂರ್ವಕ ಪ್ರಣಾಮಗಳು. ಸಮಯಕ್ಕೆ ಸರಿಯಾಗಿ ಇದನ್ನು ಸುಂದರವಾಗಿ ಮುದ್ರಿಸಿದ ಸಹಕಾರಿ ಮುದ್ರಣಾಲಯ, ಕುಮಟಾ ಇದರ ವ್ಯವಸ್ಥಾಪಕರಿಗೂ, ಪ್ರಕಾಶನಕ್ಕೆ ತಂದ ಯಕ್ಷಗಾನ ಕಾರ್ಯಾಲಯದ ಸಂಚಾಲಕರಿಗೂ ಧನ್ಯವಾದಗಳನ್ನು ಸಲ್ಲಿಸಿ ವಿರಮಿಸುವ,

ವಿದ್ವಜ್ಜನ ವಿಧೇಯ,

ದೇಲಂತಬೆಟ್ಟು,
೧೧-೭-೧೯೫೪

ಪದ್ಯಾಣ ವೆಂಕಟೇಶ್ವರ ಭಟ್ಟ

ಯಕ್ಷಗಾನ 'ಸೌದಾಸ ಚರಿತ್ರೆ'ಯಲ್ಲಿರುವ

ಪಾತ್ರವರ್ಗ

೧. ಮಿತ್ರಸಹ (ಸೂರ್ಯವಂಶದ ರಾಜ, ಸುದಾಸನ ಮಗ)
೨. ಮದಯಂತಿ (ಮಿತ್ರಸಹನ ಪತ್ನಿ)
೩. ವನಪಾಲಕರು
೪. ಶೂರಸಿಂಹ (ಕಿರಾತ)
೫. ದೀರ್ಘಾಕ್ಷ } (ಕುಂಡೋದರಿಯ ಮಕ್ಕಳು)
೬. ಧೂಮ್ರಾಕ್ಷ }
೭. ಕಪಟಬ್ರಾಹ್ಮಣ
೮. ವಸಿಷ್ಠ
೯. ಶಾರದ್ವತ
೧೦. ವಿಮಲೆ
೧೧. ಮೇಘವರ್ಣ (ಶಾಪಗ್ರಸ್ತ ಮಿತ್ರಸಹ)
೧೨. ಭಂಡಾಸುರ (ಚಂಡಾಸುರನ ಮಗ)
೧೩. ದೇವೇಂದ್ರ
೧೪. ಅಗ್ನಿ
೧೫. ಯಮ
೧೬. ವರುಣ
೧೭. ವಾಯು
೧೮. ದ್ವಾರಪಾಲಕ
೧೯. ನಾರದ

॥ಶ್ರೀ:॥

ಶ್ರೀ ವೆಂಕಟೇಶಾಯ ನಮಃ



ಯಕ್ಷಗಾನ

ಸೌದಾಸ ಚರಿತ್ರೆ

ಶಾರ್ದೂಲವಿಕ್ರೀಡಿತಂ ವೃತ್ತಂ

ಶ್ರೀಮತ್ಕೌಸ್ತುಭಕಾಂತಿ ಶೋಭಿತ ತನುಂ ಶ್ರೀಚಂಚಲಾಕ್ಷೀಕ್ಷಿತಂ ।
ಸೋಮಾರ್ಕಾದಿ ಸುರೌಘ ಪೂಜಿತಪದಂ ಪಾದಾನತಾಭೀಷ್ಟದಂ ॥
ಶ್ರೀಮಂತಂ ಧಿಷಣಾದಿಯೋಗಿ ನಮಿತಂ ಪೂರ್ಣೇಂದುಬಿಂಬಾನನಂ ।
ಕಾಮಾರಾತಿಸಖಂ ಸುಪೀತವಸನಂ ಶ್ರೀವೆಂಕಟೇಶಂ ಭಜೇ ॥೧॥

ರಾಗ ನಾಟಿ—ಝಂಪೆ ತಾಳ

ಜಯ ಪೂಜ್ಯ ಗಜವದನ ಜಯ ಸುಶೋಭಿತ ರದನ । ಜಯಕಾಂತಿ ಜಿತಮದನ ಜಯ ದಯಾಸದನ ॥ ಜಯ ಜಯತು ಜಯತು ॥ಪಲ್ಲ॥ ವಿವಿಜರಭಿಮತದಿ ನೀ ಜವದಿ ರಾವಣನೊಯ್ವ । ಶಿವನಾತ್ಮಲಿಂಗವನು । ಬುವಿಯೊಳಿರಿಸಿದೆ ॥ ಜಯ ॥ ೧ ॥ ಗೋಕರ್ಣ ಕ್ಷೇತ್ರ ಭೂ । ನಾಕಿಜನ ಸೇವ್ಯನಾದು । ನಾಕಿತತಿವಂದ್ಯ ವರ । ನೇಕದಿಂದಾಯ್ತು ॥ ಜಯ ॥ ೨ ॥ ಗಿರಿಶನಂಕದಿ ಕುಳಿತು । ಗಿರಿಜೆಯುತಿ ಸ್ನೇಹವನು । ಸರಸದಿಂ ಸವಿದು ನೀ । ವರಸುವೆಯ ಗಣಪ ॥ ಜಯ ॥ ೩ ॥ ಕರುಣೆಯನು ಬೀರು ಪರಿ । ಹರಿಸುತ್ತ ವಿಘ್ನವನು । ಹರಪುತ್ರ ಗಜವಕ್ತ್ರ । ಸುರಭಕ್ತಿಪಾತ್ರ ॥ ಜಯ ॥ ೪ ॥

ಭಾಮಿನಿ

ಸರಸಿಜಾನನೆ ಲೋಕವಂದಿತೆ । ವರದೆ ವೀಣಾಪಾಣಿ ಭಾರತಿ । ಕರದಿ ಪುಸ್ತಕ ಧರಿಸಿ ಕುಳಿತಿಹ ವಾಣಿ ಫಣಿವೇಣಿ ॥ ಚರಣಕಮಲಕೆ ನಮಿಸೆ.

ಸಿನ್ನಯ । ಪರಮ ಕಲ್ಯಾಣವನು ಮಾಡುತ । ಕರುಣಿಸೆನ್ನನು ತಾಯೆ ಬ್ರಹ್ಮನ ರಾಣಿ ಕಲ್ಯಾಣಿ ॥ ೧ ॥

ದ್ವಿಪದಿ

ವಿಷ್ಣುಮೂರ್ತಿಯ ಪಾದಯುಗ್ಮಕಭಿನಮಿಸಿ ॥ ವಿಷ್ಣುಪ್ರೀತೆಯ ನಾಮವನು ಮನದಿ ನೆನಸಿ ॥ ೧ ॥ ಗಿರಿವಾಸಿ ಗಿರಿಜಾತೆಯರ ಪದವ ಸ್ಮರಿಸಿ ॥ ಗುರು ವೇದವ್ಯಾಸ ಶುಕ ಯೋಗಿಗಳ ನಮಿಸಿ ॥ ೨ ॥ ಆದಿಕವಿ ವಾಲ್ಮೀಕಿಯಂ ಮುದದಿ ನುತಿಸಿ ॥ ಮೋದಯುತನಾಗಿ ತಾಯ್ತಂದೆಗಭಿನಮಿಸಿ ॥ ೩ ॥ ನೈಮಿಷಾರಣ್ಯದಲಿ ಮುನಿಸಮೂಹದೊಳು ॥ ರೋಮಹರ್ಷಣ ಸುತನು ಪೇಳ್ದ ಮೋದದೊಳು ॥ ೪ ॥ ಭಾಗವತ ಪಾವನಪುರಾಣದೊಳು ಮೆರೆವ ॥ ಭೋಗ ಭಾಗ್ಯದಿ ಸೂರ್ಯವಂಶದೊಳಗೆಸೆವ ॥ ೫ ॥ ಮಿತ್ರಸಹನೃಪನ ಚರಿತವನು ಮೋದದಲಿ ॥ ಚಿತ್ರಿಪೆನು ಗುರುದಯದಿ ಯಕ್ಷಗಾನದಲಿ ॥ ೬ ॥ ದೋಷಜ್ಞರಿದನು ಪ್ರೀತಿಯಲಿ ನೋಡುವುದು ॥ ದೋಷವಿರಲೀ ವತ್ಸನನ್ನು ಮನ್ನಿಪುದು ॥ ೭ ॥

ರಾಗ ಸೌರಾಷ್ಟ್ರ—ತ್ರಿವುಡೆ ತಾಳ

ಭಾಗವತ ಚರಿತಾಮೃತವ ಶುಕ । ಯೋಗಿ ಪೇಳುತಲಿರಲು ಭೂಮಿಪ । ನಾಗಳುತ್ತರೆಯಣುಗನೊರೆದನು । ರಾಗದಿಂದ ॥ ೧ ॥ ಪೂತ ದಿನಪತಿ ಕುಲದಿ ಜನಿಸಿಹ । ಖ್ಯಾತನಾಮನು ಮಿತ್ರಸಹ ಕ್ಷಿತಿ । ನಾಥ ತಾಳಿದನೆಂತು ಕುಲಗುರು । ನಾಥ ಶಾಪ ॥ ೨ ॥ ಭೂಮಿಪಾಲನು ಕಲ್ಮಷಾಂಘ್ರಿಯ । ನಾಮಧೇಯವ ನೆಂತು ಪಡೆದನು । ಕಾಮಿನಿಯ ಸಹಯೋಗದಿಂ ಪರಿ । ಣಾಮವೇನು ॥ ೩ ॥ ರಾತ್ರಿಚರನಾಗಿರ್ದು ಶಾಪದಿ । ಧಾತ್ರಿಯಧಿಪನವೆಷ್ಟು ಸಮಯ ಕ । ಳತ್ರ ವಿರಹವಸಾಂತ ವ್ಯಾಸನ । ಪುತ್ರ ಪೇಳು ॥ ೪ ॥ ಎಂದು ತನ್ನಯ ಪಾದಗಳಿಗಭಿ । ವಂದಿಸಿದ ನೃಪನನ್ನು ಪರಸು । ತ್ತಂದು ಪೇಳಿದ ಶುಕನು ನಗುತಾ । ನಂದದಿಂದ ॥ ೫ ॥

ರಾಗ ಭೈರವಿ—ಝಂಪೆ ತಾಳ

ಧಾರಿಣೀ ವದನದೊಳು । ಚಾರುತಿಲಕದ ತೆರದಿ । ತೋರುವುದು ಸಾಕೇತ । ಮೂರು ಜಗವರಿಯೆ ॥ ೧ ॥ ಸೂರ್ಯವಂಶಜ ನೃಪರು । ಕಾರ್ಯಗಳನೆಸಗುತ್ತೈ । ಶ್ವರ್ಯಯುತರಾಗಿರ್ದು । ಭಾರ್ಯೆಯರು ಸಹಿತ ॥ ೨ ॥ ಮೆರೆವಸ್ಥೆ

ತದ್ವಂಶ । ವರಜಲಧಿಯಲ್ಲಿಸೆವ । ಸುರಪಸಮ ಮಿತ್ರಸಹ । ನರಪತೀಶ್ವರನು ॥ ೩ ॥ ಮದಭರಿತ ಗಜದಂತೆ । ಮುದವಾಂತು ನಡೆವ ಪರಿ । ಮದಿರಾಕ್ಷಿಯರ್ಧಾಂಗಿ । ಮದಯಂತಿಯವಗೆ ॥ ೪ ॥ ಧರೆಯಾಣ್ಮನೊಕ್ಕೊಡೆಯ । ನೆರಳಲ್ಲಿ ಪೃಥ್ವಿಯನು । ಗುರುಸಚಿವರಭಿಮತದಿ । ಪೊರೆಯುತ್ತ ಮೆರೆದ ॥ ೫ ॥

ವಾರ್ಧಿಕ

ದುಷ್ಟರನು ಮಥಿಸುತ್ತ ಶಿಷ್ಟರನು ಪೊರೆಯುತ್ತ । ಅಷ್ಟಮೂರ್ತಿಯ ಭಜಿಸುತಿಷ್ಟಿಗಳನೆಸಗುತ್ತ । ಶ್ರೇಷ್ಠ ದಿವಿಜರಿಗೆ ಸಂತುಷ್ಟಿಯನ್ನೆಸಗುತ್ತ ಸೃಷ್ಟೀಶನೆಸೆಯುತಿರಲು ॥ ಇಷ್ಟಪ್ರಜೆಗಳ ಸಕಲ ಕಷ್ಟ ಸರಿಸಲ್ ಸಿಂಹ । ವಿಷ್ಟರದಿ ಕುಳಿತಿರಲು ತುಷ್ಟಿಯಿಂದೊಂದು ದಿನ । ದುಷ್ಟಮೃಗಬಾಧಿತರು ಕ್ಲಿಷ್ಟಹರನವಿಗೆರಗಿ ಕಷ್ಟವಂ ಪೇಳ್ದರಂದು ॥ ೧ ॥

ರಾಗ ಮುಖಾರಿ—ಆದಿತಾಳ

ಜನಪಾಲ ಲಾಲಿಸೆಮ್ಮ ನುಡಿಯ । ಪಾಲಿಸು ಜೀಯ । ಜನಪಾಲ ಲಾಲಿಸೆಮ್ಮ ನುಡಿಯ ॥ ಪಲ್ಲ ॥ ವನದಲ್ಲಿ ಚರಿಸಲಾರೆವಿಂದು । ತನುಮನ ನೊಂದು । ಘನವಾಗಿ ಮೃಗಗಳ ಕಾಟ ತಿಂದು ॥ ಮುನಿಯುವ ಸೂಕರ ವಾನರ ಪಂಚಾನನಗಳಾನೆ ಮುಸು ಚೆನ್ನನಾಯಿಗಳು । ವನದೊಳು ಚರಿಸುವ ಕ್ರೂರ ಮೃಗಂಗಳು । ವನಚರರೆಮ್ಮನು ನೆಲಸಲು ಬಿಡವು ॥ ಜನಪಾಲ ॥ ೧ ॥ ಪಿಕ ಹಂಸ ಗೃಧ್ರ ಪಾರಾವತವು । ಮತ್ತತಿಯಾಗಿ । ಬಕ ವಾಯಸಂಗಳು ಹೆಚ್ಚಿದುವು ॥ ಶುಕಸಿಕರವು ಕಾರಂಡವತತಿಯು । ಶಕುನಿ ಕೇರೆ ಗೊರವಂಕ ಘೂಕಗಳು । ಸಕಲ ಧಾನ್ಯ ಬೆಳೆತೆನೆಗಳತುಳಿಯುತ । ಕುಕಿಲುತ ತಿನ್ನುತ ಪಾಳ್ಗೆಡಹಿದುವು॥ ಜನಪಾಲ ॥ ೨ ॥ ಪಾಲಿತವಾಗಿರ್ಪ ವನವಿಂದು । ಮೃಗಗಳ ಕಾಟದಿ । ಮಾಲಿನ್ಯ ಪೊಂದಿತಯ್ಯ ನೊಂದು ॥ ತಾಲ ಬದರಿ ವರ ದೇವದಾರು ಹಿಂತಾಲ ಪನಸ ದಾಡಿಮ ಖರ್ಜೂರವ । ನಾಲಿಕೇರ ಮಧುರಾಮ್ರಜಂಬೀರವ । ಕಾಲಸ್ವರೂಪಿಗಳೆಲ್ಲ ಮುರಿದವು ॥ ಜನಪಾಲ ॥ ೩ ॥ ಸಂಪಿಗೆ ಜಾಜಿಯಿರವಂತಿಗೆಯು । ಪರಿಪರಿಯಾಗಿಹ । ಪೆಂಪಿನಿಂದೆಸೆಯುತಿಹ ಕೇತಕಿಯು ॥ ಕೆಂಪನು ಬೀರುವ ಕಮಲ ಬಕುಲ ವನ । ಸಂಪದವನು ಪರಿವರ್ಧಿಪ ಸುಮಗಳ । ಸಂಪತ್ತಿಯು ಕುಗ್ಗಿತು ಖಗಮೃಗಗಳ । ರಂಪಾಟದಿ ನಾವ್ ವಾಸಿಪುದೆಂತು ॥ ಜನಪಾಲ ॥ ೪ ॥

ಭಾಮಿನಿ

ವನಚರರ ನುಡಿಕೇಳಿ ಭೂಮಿಪ । ನನಿತರೊಳು ಧೈರ್ಯವನು ಪೇಳುತ । ನೆನೆದು ಬೇಟೆಯ ಗುಣಗಳನು ಸಂತೋಷಯುತನಾಗಿ ॥ ವನಕೆ ತೆರಳಲು ಬೇಡರಧಿಪಗೆ । ದಿನಪವಂಶಜ ಕಳುಹಿ ಚರರನು । ವನಜಮುಖಿ ಸತಿಗುಸಿರ ಲೈದಿದನಂತವುರಕಾಗ ॥ ೧ ॥

ಕಂದ

ಬಂದಿಹ ಪತಿಯನು ನಿರುಕಿಸಿ । ಸುಂದರಿ ಬಹು ವಿಧದೊಳುಪಚರಿಸಿ ಸಮ್ಮುದದಿಂ ॥ ಮಂದಹಸನ್ಮುಖಿ ನೃಪನಾ । ನಂದವ ಪೆರ್ಚಿಸುತ ಮಧುರ ವಚನವ ನುಡಿದಳ್ ॥ ೧ ॥

ರಾಗ ಶಂಕರಾಭರಣ—ತ್ರಿವುಡೆತಾಳ

ಎರೆಯ ನಿನ್ನಾಕೃತಿಯ ನೋಡಲು । ಪರಿಯು ಬೇರೆಯದಾಗಿದೆ ॥ ಅರುಹು ಯೆನ್ನೊಳು ಪಯಣವೆಲ್ಲಿಗೆ । ಕರವ ಮುಗಿದು ಬೇಡುವೆ । ವಿನಯದಿಂದ ॥ ೧ ॥

ರಾಗ ಕೇದಾರಗೌಳ—ಅಷ್ಟತಾಳ

ನಾರಿಯರೆಲ್ಲರು ಸಹಜದಿ ನೈಪುಣ್ಯ । ತೋರಿಪರೀ ಲೋಕದಿ ॥ ಸೀರೆ ಸೀನೂಹಿಸು ಗಮನದ ಗುರಿಯನ್ನು । ಶಾರದೆಯಂತಿರ್ಪಳೆ ॥ ೧ ॥

ರಾಗ ಶಂಕರಾಭರಣ—ತ್ರಿವುಡೆತಾಳ

ಮೆರೆವ ನಿನ್ನಯ ವೇಷಭೂಷಣ । ಕೊರೆಯುವುದು ಕಣ್ಮನವನು ॥ ಅರಿತೆ ಯೆಲ್ಲಿಗೊ ಪಣದಿ ಕುವರಿಯ । ವರಿಸಲೋಸುಗ ಪೋಪುದ । ವಿಭವದಿಂದ ॥ ೧ ॥

ರಾಗ ಕೇದಾರಗೌಳ—ಅಷ್ಟತಾಳ

ಸುಂದರಾಂಗಿಯೆ ಕೇಳು ನಿನ್ನೂಹೆ ದಿಟವಲ್ಲ । ಇಂದು ಪೋಗುವೆ ಬೇಟೆಗೆ ॥ ಚಂದದಿ ಬೀಳ್ಕೊಟ್ಟು ಕಳುಹೆನ್ನ ಶಬರರ । ವೃಂದವು ಕಾದಿರ್ಪುದು ॥ ೧ ॥

ರಾಗ ಶಂಕರಾಭರಣ—ತ್ರಿವುಡೆತಾಳ

ಇನಿಯ ನಿನ್ನನು ಬಿಟ್ಟು ಕ್ಷಣಕೂ । ಮನೆಯು ನನಗೆ ಸೊಗಸದು ॥ ಮುನಿಸು ತಾಳದೆ ತನ್ನ ಸಂಗಡ । ವನಕೆ ಕರೆದುಕೊ ಯೆನ್ನನು । ಮೋದ ಗೊಂಡು ॥ ೧ ॥

ರಾಗ ಕೇದಾರಗೌಳ—ಅಷ್ಟತಾಳ

ಮಾವನ ಮನೆಗೆ ನಾ ಪೋಗುವದಿಲ್ಲವು । ಭಾವಕಿ ಕರೆದುಕೊಂಡು॥ ಸೋವನ್ನು ತಿಳಿದು ಸಂಚರಿಸುತ ಮೃಗಗಳ । ಪ್ಪ್ಯಾವೆ ನಾಸೆಂತು ಪೇಳು ॥೧॥

ರಾಗ ಶಂಕರಾಭರಣ—ತ್ರಿವುಡೆತಾಳ

ರಥಿಕರೊಳು ನೀ ಶ್ರೇಷ್ಠನಾಗುತೆ । ಗತಿಯು ಕುಂಠಿತವಾಗದು ॥ ರಥದೊಳಿರಿಸುತ ಬೇಂಟೆಗೈಯಲು । ಪತಿಯೆ ನೀ ಬಲು ನಿಪುಣನು । ತಿಳಿವೆನೈಸೆ ॥೧॥

ರಾಗ ಕೇದಾರಗೌಳ—ಅಷ್ಟತಾಳ

ಕಾಂತಾರದಲ್ಲಿಹ ಮೃಗಗಳ ಕ್ರೌರ್ಯವ । ಕಾಂತೆ ನೀನೆಂತು ಕಾಂಬೆ । ಎಂತು ನೀ ಹಸಿವನ್ನು ತೃಷೆಯನ್ನು ಸಹಿಸುವೆ । ಸ್ವಾಂತದಿ ಯೋಚಿಸೆಂಬೆ॥೧॥

ರಾಗ ಶಂಕರಾಭರಣ—ತ್ರಿವುಡೆತಾಳ

ಅರಸ ನಿನ್ನಯ ಸನ್ನಿಧಾನದಿ । ಮೆರೆಯುವುದೆ ಮೃಗಕ್ರೌರ್ಯವು ॥ ಪುರದಿ ನೊಂದೆನು ವನದ ಶೋಭೆಯ । ನಿರುಕಿಸುವೆ ನಾ ಪ್ರಿಯಕರ । ಬರುವೆ ಜೊತೆಗೆ ॥ ೧ ॥

ಭಾಮಿನಿ

ಸತಿಯು ಮಾತಿಗೆ ನಸುನಗುತ ಸ । ಮ್ಮತಿಯನೀಯುತ ಸಿದ್ಧನಾಗುತ । ಮತಿಯುತಾವನಿನಾಥ ಶಬರರ ಪಡೆಯನೀಕ್ಷಿಸಲು ॥ ಅತಿ ಜವದಲೈತಂದು ಬೇಡರ । ಪತಿಯು ಮಣಿಯಲು ಮಿತ್ರಸಹ ಭೂ । ಪತಿಯು ಬೇಟೆಗೆ ಮನವ ಮಾಡಿಹೆನೆಂದೆನಲು ನುಡಿದ ॥ ೧ ॥

ರಾಗ ಕೇದಾರಗೌಳ—ಝಂಪೆತಾಳ

ಎಲೆ ಸಾಮಿ ಕೇಳು ಮಾತ । ನಮ್ಮ ಜನ । ಬಲವಾಯ್ತು ಭೂರಿ ಪ್ರೀತ ॥ ಮೆಲವೆ ಮಾಂಸಾಹಾರವ । ಬಹು ದಿವಸ । ಕಳೆದು ಹೋಯ್ತೀಗ ವನವ॥೧॥ ಸರಿದು ಮೃಗಗಳತರಿಯುವ । ಜವದಿ ಬಹು । ಪರಿಯ ಖಗಗಳ ಹಿಡಿಯುವ ॥ ಕರಿಯ ದಂತವ ಪಡೆಯುವ । ಹುಲಿಗಳನು । ಇರಿದು ಚರ್ಮವಸುಲಿಯುವ ॥ ೨ ॥ ಎಂದು ಪೇಳಲು ಶಬರನು । ಮಿತ್ರಸಹ । ನಂದು ವಿಭವದಿ ಪೊರಟನು॥ ಚಂದದಿಂ ಪರಿವಾರದಿ । ಕೈದು ಬಲೆ । ಯಿಂದ ವಾದನ ಘೋಷದಿ ॥ ೩ ॥

ರಾಗ ಮಾರವಿ—ಏಕತಾಳ

ಆಡುತ ಬೇಟೆಯ । ಕ್ರೋಡವ ಕೊಲ್ಲುತ । ದಾಡೆಯ ಕೊಳ್ಳುತ । ಗೂಢವಾದ ಮೃಗ । ವ್ರೋಡಿಸಿ ಕೊಲ್ಲುತ । ಕೋಡನು ಚರ್ಮವ । ಕಾಡಿಸಿ ಸುಲಿಯುತ । ಕಾಡೊಳು ಚರಿಸುತ ॥ ಬಂದರಂದು ॥ ೧ ॥ ಹೊಡಿಹೊಡಿಹೆಬ್ಬುಲಿ। ಪಿಡಿಪಿಡಿ ಪಿಡಿಯನು । ಕಡಿಯಿರಿ ಖಡ್ಗಿಯ । ಖಡುಗದಿ ಸಿಂಹವ । ಬಡಿಯಿರಿ ಗದೆಯಿಂ । ಕೆಡೆಯಿಸಿ ಕರಿಗಳ । ಮಡಿಯಿಸಿ ಮೊಲಗಳ । ನಡಿಸಡಿರೆನ್ನುತ ॥ ಬಂದರಂದು ॥ ೨ ॥ ಬಿಗಿಯುತ ಬಲೆಯನು । ಖಗಗಳ ಬೀಳಿಸಿ । ಲಗುಬಗೆಯಿಂದಲಿ । ಸುಗಿಯುತ್ತೋಡುವ । ಮೃಗಗಳ ತಂಡವ । ಸಿಗಿಯುತಮಾಂಸವ। ತೆಗೆತೆಗೆದಿರಿಸುತ । ಬಿಗುಹನು ತೋರುತ ॥ ಬಂದರಂದು ॥ ೩ ॥

ವಾರ್ಧಿಕ

ಕೈರಾತಪತಿ ಬೇಟೆಯಾಡಲೊಂದೆಡೆಯಲ್ಲಿ । ವೀರ ಭೂಪಾಲಕನು ಬೇರೊಂದು ಕಡೆಯಲ್ಲಿ । ನಾರಿ ಮದಯಂತಿಗುನ್ನತ ಶಿಖರದೊಳ್ ನಿಂತು ತೋರಿದನು ವಿಂಧ್ಯಾದ್ರಿಯ ॥ ನೀರೆ ನೋಡಾಗಸವ ಚುಂಬಿಸುವ ಶಿಖರದೊಳ್ । ತೋರುತಿಹ ಮೇಘವೇ ಕೇಶವೆನೆ ಬಿಲಮುಖದಿ । ಘೋರವಹ ವ್ಯಾಘ್ರಗರ್ಜನದಿಂದ ಗರ್ಜಿಸುವ ಕಾರಿರುಳ ದೈತ್ಯನಂತೆ ॥ ೧ ॥ ಇರುಳಂತೆ ತಮದಿಂದ ಕೂಡಿರ್ದು ಕೈಲಾಸ । ಗಿರಿಯಂತೆ ಶಿವೆಯಿಂದ ಸಂಯುತಂ ವೈಕುಂಠ । ಪುರದಂತೆ ಹರಿಯುತಂ ಶಶಿಯಂತೆ ಶಶಧರಂ ಶಿವನಂತೆ ಭೂತಪತಿಯು ॥ ಸುರವರ್ತ್ಮದಂತೆ ಋಕ್ಷಂಗಳಿಂ ಕೂಡಿರ್ದು । ಶರಜನ್ಮನಂತೆ ಶಿಖಿಯುತನಾಗಿ ಸುರಪತಿಯ । ತೆರದಂತೆ ಕರಿಯುತಂ ಯಮನಂತೆ ಮಹಿಷದಿಂ ಶೋಭಿಪುದು ವಿಂಧ್ಯಾದ್ರಿಯು ॥ ೨ ॥

ಕಂದ

ಇಂತೀ ಪರಿಯೊಳ್ ಪ್ರಕೃತಿಯ- । ನಂತ ಸುಶೋಭೆಯ ಬಣ್ಣಿಸಿ ಜನಪಂ ಗಿರಿಯಿಂ ॥ ಸಂತಸದಿಂ ಕೆಳಗಿಳಿಯುತ । ಕಾಂತೆಗೆ ವನತರುಲತೆಗಳ ತೋರಿಸಿ ಪೇಳ್ದಂ ॥ ೧ ॥

ರಾಗ ಸಾಂಗತ್ಯ—ರೂಪಕತಾಳ

ತರುಣಿ ನೋಡೀ ಚೂತ ತರುವನ್ನು ಮಲ್ಲಿಕಾ । ಕರಶಾಖೆಯಿಂದಪ್ಪಿಕೊಳುತ ॥ ಮೆರೆವುದು ಸಿತಪುಷ್ಪರೂಪದಿಂ ಸ್ಮಿತವನ್ನು । ಹರಹಿ ಸಂತಸ

ಪೊಂದುತ ॥ ೧ ॥ ಅಲ್ಲಿ ನೋಡಾ ಶುಕಿಯೊಂದು ದಾಡಿಮದ್ರುಮ । ದಲ್ಲಿಹ ಫಲವನ್ನು ಕಚ್ಚಿ ॥ ಉಲ್ಲಾಸದಿಂದಿರ್ಪ ಕತದಿಂದೆ ಬೀಜಗಳ್ । ಪಲ್ಲುಗಳಂತೆ ತೋರುವುವು ॥ ೨ ॥ ಇತ್ತ ನೋಡೀ ಸುಂದರಾಶೋಕ ತರುವನ್ನು । ಮತ್ತತೆ ಯಿಂ ಕೂಡಿಕೊಂಡು ॥ ಎತ್ತಿ ಸ್ವಹಸ್ತಪಲ್ಲವದಿಂದ ಯಾರನ್ನು । ಹೃತ್ತೋಷದಿಂ ಕರೆಯುವುದೋ ॥ ೩ ॥ ನಳಿನಾಕ್ಷಿ ನೋಡು ಚಂಪಿಕೆಯು ಪತ್ರಗಳೆಂಬ । ಮಲಿನ ಕಣ್ಣೀರ್ಗರೆಯುವುದು ॥ ಬಲು ಕೋಪಿ ಪ್ರಿಯ ತುಂಬಿ ಬಾರದ ದೆಸೆ ಯಿಂದ । ಗಳಿತ ಯೌವನ ಸುಮವಾಗಿ ॥ ೪ ॥ ಮಾವಿವು ಪಾಲಾಶ ಮತ್ತಿ ಜಂಬೂವೃಕ್ಷ । ಪೀವರಸ್ತನಿ ನೋಡು ಪನಸ ॥ ಸೇವಂತಿಗೆಯು ಜಾಜಿ ರೆಂಜೆ ಗೋರಟೆ ಬಟ್ಟ । ತಾವರೆ ಕರವೀರ ಗಿಡವು ॥ ೫ ॥

ಕಂದ

ಎನುತಾನಂದದಿ ಚರಿಸುತ । ವನದೊಳು ಬಹುವಿಧ ತರುಲತೆ ಖಗಮೃಗ ತತಿಯಂ ॥ ಜನಪಂ ಬಣ್ಣಿಸಿ ಕಾಂತೆಗೆ । ಸನಿಹದಿ ಹರಿಯುವ ನದಿಯನು ತೋರಿಸುತೆಂದಂ ॥ ೧ ॥

ವಾರ್ಧಿಕ

ನೊರೆಯೆಂಬ ಹಾಸದಿಂ ಕುಲುಕುಲು ನಿನಾದದಿಂ । ತೆರೆಯೆಂಬ ಸೆರಗಿನಿಂ ಮುಖಕಮಲ ಕಾಂತಿಯಿಂ । ತೊರೆಯೆಂಬ ತೋಳ್ಗಳಿಂ ಮೀನೆಂಬ ಕಣ್ಗಳಿಂ ಶೈವಾಲಕೇಶದಿಂದ ॥ ಮರಳೆಂಬ ಜಘನದಿಂ ಖಗಶ್ರೇಣಿಕಾಂಚಿಯಿಂ । ಮೆರೆ ಯುತಿಹ ಸುಳಿಯೆಂಬ ನಾಭಿಯಿಂ ಕೋಕಕುಚೆ । ಗಿರಿಯಿಂದ ರೇವೆ ನಿಜಪತಿ ಗೃಹಕೆ ಪೋಪ ಸಂರಂಭವೇನೆಂಬೆ ನೋಡು ॥ ೧ ॥

ಕಂದ

ನದಿಯೊಳು ನಿರ್ಮಲ ಜಲದೊಳು । ಮುದದೊಳು ಮೀಹವನು ನಡೆಸೆ ಹವಣಿಸಿಯಾಗಳ್ ॥ ಸುದತಿಯು ಪತಿಯುಂ ಮೆಚ್ಚಿಸ । ಲದಕಾರಾಜನು ಸತಿ ಯೊಡನಾಡಿದ ಜಲದೊಳ್ ॥ ೧ ॥

ರಾಗ ಪಂತುವರಾಳಿ—ಅಷ್ಟತಾಳ

ಆಡಿದರ್ ತೋಷದಲ್ಲಿ । ಹಂಸಗಳಂತೆ । ಕ್ರೀಡೆಯ ಜಲದಲ್ಲಿ ॥ ಪಲ್ಲ ॥ ನೋಡುತ್ತ ನಲಿಯುತ್ತ । ಈಜುತ್ತಲಾಡುತ್ತ । ಗಾಢ ಪರಿರಂಭದಲ್ಲಿ । ಪರಿ

ಚುಂಬಿಸುತ್ತ । ಕೂಡಿದ ಪ್ರೇಮದಲ್ಲಿ ॥ಅನುಪಲ್ಲ॥ ಬಂದೆಡೆಯೊಳು ಮುಳುಗಿ। ರಾಜನು ಪಿಡಿ । ದಂದು ಕಾಲನು ಹುಡುಗಿ ॥ ಸುಂದರಿ ಬೆಚ್ಚುತ್ತ ಪ್ರಿಯನನ್ನು ಕೂಗಲು । ಬಂದನು ಭೂಪನಾಗ । ಮೇಲಕೆ ಯೆದ್ದು । ಚಂದದಿಂ ಪಿಡಿದ ನಾಗ ॥ ೧ ॥ ಮಾಸಿದ ಮುನಿಸನಾಗ । ಸೇಹದಿ ಚಂಪ । ನಾಸೆಯು ನಗಿಸಿದಾಗ ॥ ಸೂಸಲು ಪ್ರೇಯಸಿ ಕಡೆಗಣ್ಣ ನೋಟ ವಿ । ಲಾಸದ ಬೆಡಗಿನಿಂದ । ಶೋಭಿಸಿದಳು । ಹಾಸದ ಮಿರುಗಿನಿಂದ ॥ ೨ ॥

ಕಂದ

ಬಳಿಕಂ ಭೂಪತಿ ನದಿಯಿಂ । ನೆಲಕಂ ಬಂದು ಸತಿಯೊಡನೆ ವಸನವ ತೊಡುತಂ ॥ ಬಳಲಿಕೆಯಂ ಪರಿಹರಿಸಲ್ । ಲಲನೆಯ ತೊಡೆಯೊಳ್ ತಲೆಯನಿರಿಸಿ ನಿದ್ರಿಸಿದಂ ॥ ೧ ॥

ಭಾಮಿನಿ

ಅತ್ತ ವಿಂಧ್ಯಗುಹಾಂತರಾಳದಿ । ಪತ್ತನದಿ ನೆಲೆಸಿರುವ ದೈತ್ಯಾ । ಸತ್ತಮನು ದೀರ್ಘಾಕ್ಷನಲ್ಲದೆ ಧೂಮ್ರಲೋಚನನು ॥ ಮತ್ತರಾ ಸಹಭವರು ಕಾನನ । ಕತ್ತ ತೆರಳುತ ಮೃಗತತಿಯನರ । ಸುತ್ತ ಬರುತಿರೆ ನರರ ಸುಳಿವನು ತಿಳಿದು ಪೇಳಿದರು ॥ ೧ ॥

ರಾಗ ಘಂಟಾರವ—ಅಷ್ಟತಾಳ

ಆರೋ ಬಂದವರು । ನಮ್ಮಯ ವನ । ಕಾರೋ ಬಂದವರು ॥ ಪಲ್ಲ ॥ ಭಾರಿ ಮಾನವಗಂಧ ಮೂಗಿಗೆ । ಬೀರಿ ಬರುವುದು ತಮ್ಮಯಿರವನು । ಸಾರಿ ಪೇಳುವುದಾಯ್ತು ನಿಜ ಪರಿ । ವಾರಕೆಮ್ಮಯ ಭೂರಿ ಭೋಜನ॥ ಆರೋ ಬಂದವರು ॥ ೧ ॥ ಅಣ್ಣ ಏನಿದು ಚೋದಿಗವು ಬಲು । ಎಣ್ಣಿಸಲು ನಮಗಂಜಿಯಾ ಮು । ಕ್ಕಣ್ಣ ಬಾರನಿದೀಗ ಬಾಯಿಗೆ । ತಿಣ್ಣಬಲಯುತರಾಗಿ ಬಂದವ ॥ ರಾರೋ ಬಂದವರು ॥ ೨ ॥ ಸಾರತರ ನರಮಾಂಸ ತಿನ್ನದೆ । ವಾರಗಳು ಬಹು ಸಂದುಹೋದುವು । ಭೂರಿ ಕ್ಷುಧೆ ಬಾಧಿಪುದು ವನವನು । ಸೇರಿ ಬಂದವರನ್ನು ತರಿಯುವ ॥ ಆರೋ ಬಂದವರು ॥ ೩ ॥ ಪುಂಡರವರನು ಕಡಿದು ನಾವು । ತುಂಡುತುಂಡುಗಳಾಗಿ ಮಾಂಸವ । ಖಂಡವನು ತುಪ್ಪದಲಿ ಹುರಿದೆದೆ। ಗುಂಡಿಗೆಯ ಬಿಸಿ ರಕುತ ಕುಡಿಯುವ॥ ಆರೋ ಬಂದವರು ॥ ೪ ॥

ಭಾಮಿನಿ

ಎನುತ ದಾನವರಲ್ಲಿ ಚರಿಸುತ । ಬನದಿ ಗುಹೆಗುಹೆಯಲ್ಲಿ ನೋಡುತ । ಕಣಿವೆ ಕಣಿವೆಯ ಸಂದನರಸುತ ಬಂದು ನೋಡಿದರು ॥ ಮನುಜ ಸುಂದರಿ ತರುವಿಗೆರಗುತ । ಸನಿಹದೊಳು ನೃಪನನ್ನು ಮಲಗಿಸಿ । ಮನವ ಮೋಹಿಪ ಪರಿಯ ಕಾಣುತ ಮಾತನಾಡಿದರು ॥ ೧ ॥

ರಾಗ ಕಾಪಿ—ಅಷ್ಟತಾಳ

ಇವಳೆಂಥ ಚೆಲುವಿನ ಗನಿಯೋ । ಆಹಾ । ನವವಿಲಾಸದೊಳಿರ್ಪಳಾವ ಮಾನಿನಿಯೋ ॥ ಇವಳೆಂಥ ॥ ಪಲ್ಲ ॥ ವದನವು ಶಶಿಯ ನಾಚಿಪ್ಪುದು । ಮುತ್ತಿ । ರದನವು ಕುಂದಕೋರಕದಂತಿಹುದು ॥ ಮದನನ ಬಿಲ್ಲು ಹುಬ್ಬುಗಳು । ಕಂಗಳ್ । ಕದನದಿ ವಿಟರನ್ನಿರಿವ ಬಾಣಗಳು ॥ ಇವಳೆಂಥ ॥ ೧ ॥ ಬಲಮುರಿ ಶಂಖದಂತಿಹುದು । ಕಂಠ । ಸುಲಲಿತ ಸ್ವರದಿಂದ ಶುಕಿಯ ಸೋಲಿಪ್ಪುದು ॥ ನಳಿನಿಯ ತೆರದ ಬಾಹುಗಳು । ಕುಚ । ಚೆಲುವಾದ ಕಾಮೋತ್ಸವ ಕಲಶಗಳು ॥ ಇವಳೆಂಥ ॥ ೨ ॥ ಹರಿಮಧ್ಯದಂತಿಹ ಕಟಿಯು । ನಾಭಿ । ಸರಸಿಯ ಗಂಭೀರವಾಗಿಹ ಸುಳಿಯು ॥ ಸುರುಚಿರವಾದ ತ್ರಿವಳಿಯು । ರತಿ । ಯರಸಗೆ ಚಲಿಸಲು ಸೋಪಾನಾವಳಿಯು ॥ ಇವಳೆಂಥ ॥ ೩ ॥ ಮದನನ ಜಯದ ಕಂಬಗಳೋ । ಅಲ್ಲ । ಕದಳೀಗಳಂದದ ತೋರದೂರುಗಳೋ ॥ ಸುದತಿಯ ಗಮನವಿಲಾಸ । ನೋಡಿ । ವದನವ ತೋರದಾಯಿತು ಕಲಹಂಸ ॥ ಇವಳೆಂಥ ॥ ೪ ॥

ಕಂದ

ಅಂಗನೆಯಂಗ ನಿರೀಕ್ಷಿಸಿ । ಯಂಗಜಶರಗಳಿಗೆ ಸಿಲುಕಿಯಾ ದೀರ್ಘಾಕ್ಷಂ ॥ ಸಂಗಕೆ ಮನವಂ ಮಾಡಿ ಕು । ರಂಗ ಸುನೇತ್ರೆಯ ಬಳಿಯನು ಸೇರುತ ನುಡಿದಂ ॥ ೧ ॥

ರಾಗ ಸಾರಂಗ—ತ್ರಿವುಡತಾಳ

ಯಾರು ನೀನೆಲೆ ಕಾಮಿನಿ । ಪದ್ಮಾಕ್ಷಿಯೆ । ಮೂರುಲೋಕದ ಮೋಹಿನಿ । ಚಂಪಕನಾಸೆ । ವಾರಿಜ ಸುಮಗಂಧಿನಿ ॥ ಯಾರು ನಿನ್ನಯ ಪೆತ್ತವರು ಮ । ತ್ತಾರು ಸನಿಹದಿ ನಿದ್ರೆಗೈದವ । ಚಾರು ನಾಮವದೆಂತು ಮನವನು । ಸೂರೆಗೊಳ್ಳುವೆಯೇನು ಕಾರಣ ॥ ಯಾರು ॥ ೧ ॥ ದಾನವಾಧಿಪನೀತನು । ವಜ್ರ

ಖ್ಯನ । ಸೂನು ಲೋಕದಿ ಖ್ಯಾತನು । ಸಹೋದರ । ನಾನು ವಿಕ್ರಮವಂತನು॥ ನೀನು ಸುರಸುಂದರಿಯೊ ಕಿನ್ನರ । ಮಾನಿನಿಯೊ ಗಂಧರ್ವ ರಮಣಿಯೊ। ಮೀನಕೇತನ ಸತಿಯ ನಾಚಿಪೆ । ಕಾನನಕೆ ಬರಲೇನು ಕಾರಣ ॥ ಯಾರು ॥ ೨ ॥ ಅರರೆ ನಿನ್ನಯ ವದನ । ಶೋಭೆಯಗೊಳ್ಳೆ । ಕೆರೆಯಲ್ಲಿ ತಾಳಿ ಮೌನ। ಧ್ಯಾನದಿ ತಪವ । ಚರಿಸುತ್ತಲಿದೆ ನಳಿನ ॥ ಉರಿಯುತಿರುವೆನಗತನು ಶರದಿಂ । ಸರಸವಾದಾಲಿಂಗನಾಮೃತ । ವೆರಕ ಹೊಯ್ದೀಗೆನ್ನ ತಾಪವ । ಪರಿಹರಿಸು ನೀ ದಯುವಗೈಯ್ಯುತ ॥ ೩ ॥

ಕಂದ

ದನುಜರ ಮಾತಂ ಕೇಳುತ । ಮನದೊಳು ಖಳರಿವರ ನುಡಿಗೆ ಮಾರ್ನುಡಿ ಸಲ್ಲಂ ॥ ಎನುತಾದೊಡಮಾ ಸುದತಿಯು । ಮುನಿಯುತಿರುವುದು ಸಲ್ಲದ ಕತದಿಂದೊರೆದಳ್ ॥ ೧ ॥

ರಾಗ ಜಂಜೋಟಿ—ಅಷ್ಟತಾಳ

ದನುಜಪಾಲಕ ಕೇಳು ನೀನು । ಈತ । ನಿನವಂಶ ಸೌದಾಸ ನೃಪನು॥ ಜನಪನ ಪ್ರಿಯಪತ್ನಿ ಮದಯಂತಿ ಯೆಂಬಾಕೆ। ವನದಿ ಬೇಟೆಗೆ ಬಂದನೊಂದಿಗೆ । ವನವ ನೋಡಲು ಬಂದೆ ಪ್ರೇಮದಿ ॥ ೧ ॥ ಮೋದವಾಯ್ತೀಗೆನ್ನ ಮನಕೆ । ವೀರ । ನಾದೆನ್ನ ಸಲಿಸು ನೀ ಬಯಕೆ ॥ ಮೇದಿನೀಶನು ಸತ್ವಹೀನನು ತೊರೆಯುತ್ತ । ಬಾಧಿಸುವ ರತಿಪತಿಯು ಯೆನ್ನನು। ಖೇದ ಪರಿಹರಿಸೀಗ ಸುಂದರಿ ॥ ೨ ॥ ಪರನಾರಿಯೊಡನಿಂಥಾ ವಚನ । ಪೇಳ್ವ । ದುರುತರ ಧರ್ಮಕೆ ಪತನ ॥ ಕರವನ್ನು ವಿಧಿಯಿಂದ ಪಿಡಿದವನೆ ಸರ್ವಸ್ವ । ತರುಣಿಗಾಗಿಹನೆಂದು ವೇದಗ । ಳೊರೆಯುತಿವೆ ಬಿಡು ನರಕ ಮಾರ್ಗವ ॥ ೩ ॥ ಅರಿತೆ ನಾ ನಿನ್ನಯ ಮನದ । ನಲ್ಮೆ । ಹರಿದೆನ್ನ ಕಡೆಗೀಗ ಬಹುದ ॥ ಬರಿದೆ ನೀ ಧರ್ಮಕೆ ಬೆದರುತ್ತ ನೀತಿಯ । ನ್ನೊರವೆ ಕೇಳೆಲೆ ಧರ್ಮ ಕಾರಣ । ನರನ ಸುಖಕೆನೆ ಸುಖವ ಭೋಗಿಸು ॥ ೪ ॥ ಜಿಗಿ ಹಿಡಿ ನಾಲಿಗೆಯನ್ನು । ಪಾಪಿ । ಬಗುಳಬೇಡಿಂಥಾ ಮಾತನ್ನು ॥ ಸಿಗಿದು ನಿನ್ನಯ ವಕ್ಷಸ್ಥಲವನ್ನ ಪತಿಯೆದ್ದು । ಬಗಿದು ಕರುಳನು ಬೇಟೆ ನಾಯಿಗೆ। ಒಗೆಯುವನು ನೀ ತೆರಳು ಬೇಗದಿ ॥ ೫ ॥

ಭಾಮಿನಿ

ಭಾಮಿನಿಯ ನುಡಿ ಕೇಳಿ ದನುಜನು । ಭೂಮಿಪನ ಘರಿಯಲ್ಲಿ ಕೆಡಹುವೆ । ಕಾಮಿನಿಯ ಕೊಂಡೊಯ್ವೆನೆನ್ನುತ ಪೇಳಿ ಗರ್ಜಿಸಲು ॥ ಆ ಮಹಾರವಕೆದ್ದು ನೃಪತಿಯು । ಕಾಮಿ ದನುಜನ ಪರಿಯ ತಿಳಿಯುತ । ಶ್ರೈಮಿಸೀಪುರಕಟ್ಟು ವೆನ್ನುತ ರಣಕೆ ಮುಂಬರಿಯೆ ॥ ೧ ॥

ರಾಗ ಸೌರಾಷ್ಟ್ರ—ತ್ರಿವುಡೆತಾಳ

ಝಡಿದು ಖಡ್ಗವ ಶೂರಸಿಂಹನು । ಪಡೆಯ ಸಹಿತಲಿ ಬಂದು ಸಮರಕೆ । ಪಡೆದು ನೃಪನಿಂ ವೀಳ್ಯ ವೈರ್ತ್ಯರ । ತಡೆದು ನಿಂದ ॥ ೧ ॥ ಆರುಹ ದಾನವ ಯಾರು ನಮ್ಮಯ । ಧರೆಯ ಪತಿಯೊಡನೇನು ಕಾರಣ । ಧುರಕೆ ತನ್ನಯ ಪ್ರಾಣದಾಸೆಯ । ತೊರೆದು ನಿಂದೆ ॥ ೨ ॥ ಕನಕಪತ್ತನದಲ್ಲಿ ನೆಲಸಿಹ । ದನುಜಪತಿ ದೀರ್ಘಾಕ್ಷನಣ್ಣನು । ಮನುಜ ನಾರಿಯ ವರಿಸೆ ಬಯಸಿಹ । ನಿನಗೆ ಯಾಕೆ ॥ ೩ ॥ ವೈರಿ ಗಜಕೇಸರಿಯು ನಾನೆಲೆ । ಶೂರಸಿಂಹನು ನಮ್ಮ ನೃಪತಿಯ । ನಾರಿಯಾಸೆಯ ಬಿಟ್ಟು ತೆರಳೈ । ಕ್ರೂರ ದನುಜ ॥ ೪ ॥ ನೆಗೆಯ ಬೇಡೆಲವೋ ಕಿರಾತನೆ । ಮೃಗವ ಮೋಸದಿ ಕೊಲುತ ಬಲೆಯಲಿ । ಖಗವ ಹಿಡಿದಂದದಲಿ ಯುದ್ಧವ । ಬಗೆಯಬೇಡ ॥ ೫ ॥ ಸಾಸವನ್ನೇನೆಂಬೆ ಜನರನು । ಮೋಸಗೊಳಿಸುತ ಮಾಯಕದ ಬಲೆ । ಬೀಸಿ ಪರಸತಿಯನ್ನು ಸೆಳೆಯುವ । ಲೇಸು ರೀತಿ ॥ ೬ ॥ ಕದನಭೂಮಿಯಲೆನ್ನ ಶೌರ್ಯವ । ಸದೆದು ನಿನ್ನನು ತೋರ್ಪೆ ಕಾಲನ । ಸದನಕಟ್ಟುವೆನೆಂದು ಖಡ್ಗದಿ । ಮದದಿ ಹೊಡೆದ ॥ ೭ ॥

ರಾಗ ಶಂಕರಾಭರಣ—ಮಟ್ಟೆತಾಳ

ಕರದ ಭಿಂಡಿವಾಲದಿಂದ । ಭರದಿ ಶೂರಸಿಂಹನಾಗ । ಮರೆಸಿ ಖಡ್ಗ ಹತಿಯನವನ । ಶಿರಕೆ ಬಡಿದನು ॥ ೧ ॥ ತಡೆದು ಧೂಮ್ರನೇತ್ರನಾಗ । ಹಿಡಿದು ಭಿಂಡಿವಾಲ ಸೆಳೆದು । ಧಡಿಗ ನಿಲ್ಲು ನಿಲ್ಲೆನುತ್ತ । ಬಡಿದ ಶಬರಗೆ ॥ ೨ ॥ ಕಂತುವೈರಿಯಂತೆ ಖತಿಯ । ನಾಂತು ಶಬರ ಕರುಳನುಗಿವೆ । ನಿಂತು ಪೇಳಿ ಶೌರ್ಯದಿಂದ । ಕುಂತವೆಸೆಯಲು ॥ ೩ ॥ ಸೆಳೆದು ಕುಂತವನ್ನು ಜವದಿ । ಖಳನು ಪೇಳ್ದನೆಲ್ಲಿ ಕೈದು । ಮಲೆವ ಬೇಡ ತೋರು ಶೌರ್ಯ । ಕಳೆವೆ ಪ್ರಾಣವ ॥ ೪ ॥ ಮತ್ತೆಯಿಂಟಿ ಬರ್ಜಿ ಶೂಲ । ಕತ್ತಿ ಮುದ್ಗರಾದ್ಯಕೈದು । ಮೊತ್ತ ಪೋಗೆ ಮಲ್ಲರಣಕೆ । ನಿತ್ತ ಶಬರನು ॥ ೫ ॥

ಭಾಮಿನಿ

ಧೀರನಾಗಿಹೆ ಭಳಿರೆ ವಿಕ್ರಮಿ । ಶೂರಸಿಂಹನೆ ತೋರ್ದೆ ಸಾಹಸ । ಸಾರಿ ಪೇಳುವೆ ತೆರಳು ಬೇಗನೆ ಹರಣದಾಸೆಯಿರೆ ॥ ಭೂರಿ ಶೌರ್ಯದಿ ಧೂಮ್ರ ನೇತ್ರನು । ಧಾರಿಣಿಗೆ ಕೆಡಹಲ್ಕೆ ಯುದ್ಧದಿ । ಭಾರಿ ಧನುವನು ಕೊಂಡು ಭೂವರ ತಡೆದು ಪೇಳಿದನು ॥ ೧ ॥

ರಾಗ ಭೈರವಿ—ಅಷ್ಟತಾಳ

ಯಾರು ನೀನೆಲೆ ದಾನವ । ಕಿರಾತನ । ಹೋರಿ ಕೆಡೆದ ಗರ್ವವ ॥ ತೋರಲು ಬಂದೆಯಾದರೆ ನಿನ್ನ ಶಿರವನ್ನು । ಹಾರಿಪೆ ನಡೆ ಬೇಗನೆ ॥ ೧ ॥ ಅರಿಯು ಧೂಮ್ರಾಕ್ಷ ನಾನು । ಭ್ರಾಂತನೆ ಕೇಳ್ । ಹರಿಹರ ವಿಧಿಗಂಜೆನು ॥ ಉರವನ್ನು ಬಿಗಿದು ನಿನ್ನಯ ಬಿಸಿ ರಕುತವ । ಹರುಷದೊಳ್ ಕುಡಿಯುವೆನು ॥ ೨ ॥ ನಿನ್ನಂಥಾ ದನುಜರನ್ನು । ಈ ಹಿಂದಕ್ಕೆ । ಬನ್ನಬಡಿಸಿ ಕೊಂದೆನು ॥ ಜನ್ನಮಾಡುವ ಋಷಿಶ್ರೇಷ್ಠರ ಪೀಡೆಗ । ಳನ್ನು ಹರಿಸಿರ್ಪೆನಾನು ॥೩॥ ಅರಿಗಳಿ ಗನ್ನವನ್ನು । ಉಣ್ಣಿಸುವಂಥ । ಪರಮ ಪಾತಕಿಗಳನ್ನು ॥ ಕರುಣೆಯಿಲ್ಲದೆ ಋಷಿ ಜನರನ್ನು ಪೀಡಿಸಿ । ಸುರರನ್ನು ಹಿಂಡುವೆವು ॥ ೪ ॥ ಕಾಲಕಾಲಕೆ ಮಳೆಯು । ಸುರಿಸುತ ಜೀವಿ । ಜಾಲ ಪೊರೆವ ಪರಿಯು ॥ ಈ ಲೋಕದಲ್ಲಿಹ ಜನರೆಲ್ಲರರಿ ತಿರೆ । ಖೂಳ ನೀ ತಿಳಿಯೆಯಲ್ಲ ॥ ೫ ॥ ಸುರಪಕ್ಷಪಾತಿ ನೀನು । ಅಲ್ಲದೆ ರಾತ್ರಿಂ । ಚರರಿಗೆ ದ್ರೋಹವನ್ನು ॥ ವಿರಚಿಸುತ್ತಲಿ ಋಷಿಜನರನ್ನು ಪೋಷಿಪೆ । ತೆರಳೀಗ ಸುರಪುರಕೆ ॥ ೬ ॥

ರಾಗ ಮಾರವಿ—ಮಟ್ಟೆತಾಳ

ಮುಚ್ಚು ಬಾಯಿ ಹೆಚ್ಚು ಗಳಹಬೇಡವೆನ್ನುತ ॥ ಎಚ್ಚನೊಂದು ಶರವ ನೃಪನು ಕೋಪಗೊಳ್ಳುತ ॥ ೧ ॥ ಬಂದ ಶರವ ತರಿದು ಖಳನು ಲೀಲೆಯಿಂದಲಿ ॥ ಸಂಧಿಸಿದನಹೊಂದು ಶರವ ವೇಗದಿಂದಲಿ ॥ ೨ ॥ ತುಂಡು ಗೈಯ್ಯುತದನು ಜನಪ ನಿಶಿತ ಬಾಣದಿ ॥ ಭಂಡ ಧರಿಸಿಕೊಂಡ ಧನುವ ಕಡಿದ ಕೋಪದಿ ॥ ೩ ॥ ಕತ್ತಿ ಕುಂತ ಭಿಂಡಿವಾಲ ಮುಸಲ ಮುದ್ಗರ ॥ ಕತ್ತರಿಸಲು ನೃಪತಿಯೋಡಿ ಪೋದನಾಶರ ॥ ೪ ॥

ಕಂದ

ನಡೆಯಲು ಬೆದರಿದ ರಕ್ಕಸ । ಕಡುಹಿನ ದೀರ್ಘಾಕ್ಷ ಕಿಡಿಯ ಸೂಸುತ

ಕಣ್ಣಿಂ ॥ ಸಿಡಿಲಿನ ಪರಿಯಿಂ ಗರ್ಜಿಸಿ । ನಡುಗಿಸೆ ಮೂಲೋಕವ ನೃಪಗೀ
ತೆರ ನುಡಿದಂ ॥ ೧ ॥

ರಾಗ ನಾದನಾಮಕ್ರಿಯೆ—ಅಷ್ಟತಾಳ

ಯಾಕಿಲ್ಲಿ ಬಂದಿಹೆ ಮನುಜನೆ । ಮೃಗ । ವೇಕೆ ಕೊಂದಿಹೆ ಪಾಪಿಸುಮ್ಮನೆ॥
ಬೇಕಾದ ಭೋಜ್ಯಪದಾರ್ಥವ । ನೀ। ಯಾಕೆನ್ನ ಕಸಿದಿಹೆ ಸಕಲವ ॥ ೧ ॥
ವನದಿಂದ ಬಂದಿಹ ಮೃಗಗಳು । ಬೆಳೆ । ತೆನೆಗಳ ಮುರಿದಿವೆ ಖಗಗಳು ॥
ಜನರಿಗೆ ಪೀಡೆಯನೀವಾಗ । ಕೊಂ । ದೆನುಯೇನು ತಪ್ಪು ಪೇಳೆಲೊ ಬೇಗ
॥ ೨ ॥ ಪರರ ರಾಜ್ಯಕೆ ಯಾಕೆ ನಡೆತಂದೆ । ಈ । ಯರಣ್ಯವೆನ್ನದು ನೀ ತಿಳಿ
ಯೊಂದೆ ॥ ಚರಿಸುತ್ತ ಶಬರರನೊಡಗೊಂಡು । ಬನ । ಸಿರಿಯಪಹರಿಸಿದೆ ಛಲ
ಗೊಂಡು ॥ ೩ ॥ ಧಾತ್ರೀಶನಿಕ್ಷ್ವಾಕುವೆನ್ನುವ । ಈ । ಧಾತ್ರಿಯನಿತ್ತಿಹನೆಲ್ಲವ॥
ಮಿತ್ರವಂಶಜ ಕ್ಷಿತಿವರರಿಗೆ । ನಾ । ಮಿತ್ರ ಸಹನಾಳ್ವೆ ಭೂಮಿಯ ಹೀಗೆ ॥ ೪ ॥
ವೀರಭೋಗ್ಯಳು ಮಂಕುಮಾನವ । ದಿಟ । ಸೇರಳು ಧರೆ ಹಂದೆಯಂಕವ॥
ಮೂರುಕಾಲಕೆ ಸತ್ಯವಾಗಿದು । ನಾ । ಮೂರು ಲೋಕಕೆ ಶೂರನರಿವುದು ॥೫॥
ತಿಳಿದಿಹೆ ಸತ್ಯ ತತ್ತ್ವಗಳನ್ನು । ಭೂ । ಬಲನೆಯೇರಿಹಳೆನ್ನ ಭುಜವನ್ನು ॥
ಮೊಳಗಿಹೆ ವಿಜಯದುಂದುಭಿಯನ್ನು । ಜಯ । ವ್ರೊಲಿಸಿಹೆ ನವಖಂಡದೊ
ಳ್ನಾನು ॥೬॥ ಸಾಕು ಸಾಕೆಲೊ ಬಾಯಪೌರುಷ । ನೀ । ರಾಕೇಂದುವದನೆಯ
ನ್ನೊಪ್ಪಿಸ ॥ ಸಾಕೇತಪುರವನ್ನು ಬಲು ಬೇಗ । ಸೇರು । ಜೋಕೆಯಿಲ್ಲದಡೆ
ಕೊಲ್ಲುವೆನೀಗ ॥ ೭ ॥ ಫಣಿಯಮಸ್ತಕದಲ್ಲಿ ಶೋಭಿಪ । ವರ । ಮಣಿಗೆ
ಹಸ್ತವನಾರು ಚಾಚಿಪ ॥ ತ್ರಿಣಯನ ಹಣೆಯಲ್ಲಿ ಜ್ವಲಿಸುವ । ವಹ್ನಿ । ಕಣ
ಮಾಲೆಗಾರು ಕೈವೀಡುವ ॥ ೮ ॥

ರಾಗ ಮಾರವಿ—ಏಕತಾಳ

ಉರಗನ ಶಿರದಲಿ ಮೆರೆಯುವ ಮಣಿಯನು । ಗರುಡನು ಕೊಳ್ಳುವನು ॥
ಅರಿತುಕೊ ಯೆನ್ನನು ಫಣಿಭುಜನೆನ್ನುತ । ಶರವನು ಪೂಡಿದನು ॥೧॥ ಬಿಟ್ಟಿಹ
ಶರವನು ಕೂರ್ಗಣೆಯೆಸೆಯುತ । ಫಟ್ಟನೆ ಮುರಿಯುತಲಿ ॥ ಕ್ರೇಷ್ಠ ಶರಾಸನ
ವಿಕ್ಷಡಿಗೈದನು । ನೃಪ್ಪಿಪ ರೋಷದಲಿ ॥ ೨ ॥ ಗದೆಯಂ ತಿರುಹುತ್ತ ಮೋದದಿ
ದಿತಿಜನು । ಮುದದಿಂದಾಹವದಿ ॥ ಕುದಿಯುತ ರೋಷದಿ ಮೇದಿನಿಯಧಿಪನು।
ಸದೆದನು ಮಾರ್ಗಣದಿ ॥ ೩ ॥ ಹರಿತದ ಕುಂತ ತ್ರಿಶೂಲವ ಪಿಡಿದೈ । ತರಲಾ

ರಾಕ್ಷಸನು ॥ ನರಪಾಲನು ಕೈದುಗಳನು ಮುರಿಯುತ । ತರಿದನು ಕೊರಳನ್ನು ॥೪॥

ಕಂದ

ದನುಜನು ಮಡಿಯಲು ರಮಣಿಯು । ಜನಪನನಪ್ಪಿದಳು ಪರಿಪರಿಸುತ ಶ್ರಮವಂ ॥ ವನಚಾರಿಗಳಿಂ ಕೂಡುತ । ಮಾನುವಂಶಜ ನಿಜನಗರವ ಸೇರಿದನಾಗಳ್ ॥ ೧ ॥

ಭಾಮಿನಿ

ಭೂಮಿನಾಥನ ನಿಶಿತಬಾಣ । ಸ್ತೋಮದಿಂ ಬಲು ಘಾತಿಯಾಂತಿಹ । ಯಾಮಿನೀಚರನೋಡಿ ಪೋದವ ಬಂದು ನೋಡಿದನು ॥ ಭೂಮಿಯಲ್ಲಸು ತೊಲಗಿ ಮಲಗಿದ । ಸ್ವಾಮಿ ಗುಣಗಳ ನೆನೆದು ಕಾಲನ । ಧಾಮಕಟ್ಟಿದ ಜನಪನೆನ್ನುತ ತಮ್ಮ ಮರುಗಿದನು ॥ ೧ ॥

ರಾಗ ನೀಲಾಂಬರಿ—ಝಂಪೆತಾಳ

ಹಾ ದನುಜಕುಲ ಸಾರ್ವಭೌಮ । ಬಿಟ್ಟೆಮ್ಮ । ನೈದಿದೆಯ ರಣಶೂರ ಯಮರಾಜಧಾಮ ॥ ಹೇ ದಯಾನಿಧಿ ನೀನು ತೊರೆಯೆ । ನಾವೆಂತು । ಆಧರಿಸುವೆವು ಜೀವ ಸೊಗಸಿರಿಯ ದೊರೆಯೆ ॥ ಹಾ ದನುಜ ॥ ೧ ॥ ಸಣ್ಣವನ ಮೇಲೆಂಥ ಮುನಿಸು । ಪೇಳು ನೀ । ನಣ್ಣ ಸೊಗಸಾಗುವುದೆ ಕೋಪವನು ತ್ಯಜಿಸು ॥ ಬಣ್ಣಗುಂದುವುದೈಸೆ ಜಗವು । ಲೋಕದಾ । ಕಣ್ಣು ಮುಳುಗಿದ ರೆಂತು ಸಂಸಾರದಿರವು ॥ ಹಾ ದನುಜ ॥ ೨ ॥ ಕೆರೆಯಲ್ಲಿ ನೀರು ಬತ್ತಿದರೆ । ಮೀನುಗಳು । ಪರಿತಪಿಸದಿಹವೆ ತಮ್ಮಯ ಜೀವನಾರೆ ॥ ಪೊರೆಯುವರು ಯಾರೆಮ್ಮ ಜಗದಿ । ನಿನ್ನಂಥ । ವರ ವೀರಗಿಂತಾಗಲೆಂತಿರಲಿ ಸೊಗದಿ ॥ ಹಾ ದನುಜ ॥ ೩ ॥

ವಾರ್ಧಿಕ

ಕರಿಯೆನಿತು ಬಲವಂತವಾದರೂ ಕೃತಿಚತುರ । ನರನು ಸದ್ಯುಕ್ತಿಯಿಂ ಗರ್ತದಲಿ ಕೆಡಹುವನು । ನರಪತಿಯ ಚಾತುರ್ಯದಿಂ ವಧಿಸಬೇಕೆಂದು ಯೋಚಿಸುತ ತನ್ನಲ್ಲಿಯೇ ॥ ಸರಿಸುತ್ತ ಚಿಂತೆಯಂ ಮನದಿಂದ ಧೂಮ್ರಾಕ್ಷ । ಧರಿಸುತ್ತ ಪಾಚಕಬ್ರಾಹ್ಮಣನ ರೂಪವಂ । ಸರಿಯುತ್ತ ಸಾಕೇತ ಪುರಕಾಗ ಮಹಿಪನಾಸ್ಥಾನವಂ ಪೊಕ್ಕನಂದು ॥ ೧ ॥

ರಾಗ ಸಾಂಗತ್ಯ—ರೂಪಕತಾಳೆ

ನರನಾಥ ವಿಪ್ರನ ಬರವನ್ನು ಕಾಣುತ್ತ । ಕರಗಳೆರಡರ ಜೋಡಿಸುತ ॥ ವರ
ಪೀಠದಲ್ಲಿ ಕುಳ್ಳಿರಿಸಿ ಪೇಳಿದನಾಗ । ವಿರಚಿಸುತುಪಚಾರವನ್ನು ॥ ೧ ॥ ಅರಿಯೆ
ನೀವೈತಂದುದೆಲ್ಲಿಂದ ಭೂದೇವ । ಕರುಣಾದಿಂದುಸುರಬೇಕಯ್ಯ ॥ ಪರಿಪರಿ
ಯಾಗಿಹ ಸೇವೆಯಗೈಯಲು । ನರಪಾಲನೀತಗೆ ಬೆಸಸಿ ॥ ೨ ॥ ಭೂಸುರನೆಂದ
ನಿನ್ನಯ ನಮ್ರ ಭಾವದಿ । ತೋಷವಾಯ್ತೀಗೆನ್ನ ಮನಕೆ ॥ ದೇಶದೇಶವ ಚರಿ
ಸೀಗಿಲ್ಲಿ ಬಂದೆನ- । ಧೀಶನೆ ಕೇಳೆನ್ನ ವಿಷಯ ॥ ೩ ॥ ವೇದಶಾಸ್ತ್ರಗಳನ್ನು
ತಿಳಿಯೆ ಯಾಚಕವೃತ್ತಿ । ಬಾಧೆಪುದೆಂದು ನಾ ತೊರೆದೆ ॥ ಔದಾರ್ಯದಾಶ್ರಯ
ವನ್ನು ಹೊಂದಲು ನಿನ್ನ । ಮೋದವಾಗದು ನನ್ನ ಮನಕೆ ॥ ೪ ॥ ಅನುದಿನ
ಕಾರ್ಯವನ್ನೆಸಗಲು ನಿನ್ನರ । ಮನೆಯಲ್ಲಿ ಜನಜಾಲವಿಹುದು ॥ ಮನದಿ
ಮೋದವಗೊಂಡು ಪಾಚಕನನ್ನಾಗಿ । ಮನೆಯೊಳಗಿರಿಸಿಕೊಳ್ಳಯ್ಯ ॥ ೫ ॥
ಸಾಧಿತ ಪೂರ್ವಪುಣ್ಯದ ಫಲವಿದುಯೆಂದು । ಸೌದಾಸ ತೋಷದೊಳಿರಲು ॥
ಮೋದದಿ ಛಿದ್ರವನರಸುತ್ತಲಿರುತಿರ್ದ । ಭೇದವನೆಣಿಸುತ್ತ ದ್ವಿಜನು ॥ ೬ ॥

ವಾರ್ಧಿಕ

ವಸುಮತೀಶನು ತನ್ನ ಸತಿ ಸಹಿತಲೊಂದು ದಿನ । ಮಿಸುನಿ ರನ್ನಗಳಿಂದ
ನಿರ್ಮಿಸಿಹ ಪೀಠದ । ಲ್ಲೆಸೆಯುತಿರೆ ಸಚಿವಾದ್ಯರಿಂ ಕೂಡಿ ಸಭೆಯಲ್ಲಿ
ಪೌಲೋಮಿಕಾಂತನಂತೆ ॥ ಪಸರಿಸುವ ತೇಜದಿಂ ಸಾಕಾರ ತಪದಂತೆ । ಮಸ
ಗುತಿಹ ಸೌಮ್ಯದಿಂ ಪುಣ್ಯಫಲಗೊಂಡಂತೆ । ಹಸನಾದ ವೈದಿಕ ಜ್ಞಾನರೂ
ಪಾಂತಂತೆ ಮಿತ್ರಕುಲಗುರು ಬಂದನು ॥ ೧ ॥

ರಾಗ ಕೇದಾರಗೌಳ—ಅಷ್ಟತಾಳ

ಮುನಿಕುಲತಿಲಕ ವಸಿಷ್ಠನ ಕಾಣುತ್ತ । ಜನಪಾಲ ತೋಷಗೊಂಡು ॥
ವಿನಯದಿಂದರ್ಘ್ಯಪಾದ್ಯಗಳನ್ನು ನೀಡುತ್ತ । ವಿನತನಾಗುತ್ತೆಂದನು ॥ ೧ ॥
ಗುರುವರ್ಯ ನಿಮ್ಮಯ ಪಾದದ ಧೂಳಿಯಿಂ । ದರಮನೆ ಪೂತವಾಯ್ತು ॥
ಪರಿಪರಿ ವಿಘ್ನನಿವಾರಿಸೆ ಪ್ರಭುವಾಗೆ । ಗುರುಕ್ಷೇಮವೆಂತು ಕೇಳ್ವೆ ॥ ೨ ॥
ಋಷಿವರ ನಸುನಗುತೆಂದನಾಶ್ರಮದಲ್ಲಿ । ಕುಶಲವಿಂದಿರ್ಪರೆಲ್ಲ ॥ ಋಷಿಗಳು
ವಟುಗಳು ಬ್ರಹ್ಮಚಾರಿಣಿಯರೆ । ಲ್ಲೆಸೆವರು ಧರ್ಮದಿಂದ ॥ ೩ ॥ ಭೂಮಿಪ
ಪ್ರಜೆಗಳು ವರ್ಣಧರ್ಮಗಳನ್ನು । ಕ್ಷೇಮದಿ ಪಾಲಿಪರೆ॥ನೀಮನ ಮೀರಿರ್ದ

ಸಾಂಕರ್ಯ ದೋಷವ್ರ । ಸ್ವಾಮಿಯು ಸೇರುವ್ರದು ॥೪॥ ಅಪಹಾರ ಕೊಲೆ ಸುಸಿ ಹಾದರ ಮೊದಲಾದ । ಅಪರಾಧಗೈಯ್ಯುವರ ॥ ಕೃಪೆಯಿಂಸಿಕ್ಷಿಲ್ಲದೆ ದಂಡಿಸಿ ದೀನರ್ಗೆ।ಉಪಕಾರ ಮಾಡುವೆಯು॥೫॥ಫಲಿಸಲು ಕುಂದಿಸಿಕ್ಷಿಲ್ಲದಂದದಿ ಜೀನ । ಆಳಿಯು ಸಂಗ್ರಹಿಸುವಂತೆ ॥ ಕಲೆಹಾಕಿ ಕರವನ್ನು ಕೃಷಿಯಾದಿ ಸಂಪತ್ತು । ಬೆಳೆಯುವಂತೆಸಗುವೆಯ ॥ ೬ ॥ ಕಾಲಕಾಲಕೆ ವೇದವಿಹಿತ ಕರ್ಮಗಳನ್ನು । ಪಾಲಿಪೆಯಯ್ಯ ನೀನು ॥ ಸೋಲಿಪಿಂದ್ರಿಯ ಜೈಸಿ ದೈವ ವಿಪ್ರೋತ್ತಮ । ಜಾಲವ ಪೂಜಿಪೆಯ ॥ ೭ ॥

ರಾಗ ಮಧುಮಾಧವಿ—ಏಕತಾಳ

ಬಳಸುತ್ತಲಿರುವೆ ನೀಪ್ರೊರೆದ ನೀತಿಗಳ । ಬಳಸುವೆನಿನ್ನುಳಿದಿಹ ವಿಷಯ ಗಳ ॥ ೧ ॥ ದಿನಮಣಿ ಗಗನದ ನಡುವಿಗೆ ಬರಲು । ಮುನಿಯು ತನ್ನಾಶ್ರಮ ಕೈದುವೆನೆನಲು ॥ ೨ ॥ ಜನಪನು ಭೋಜನಕುಳಿಯಬೇಕೆನಲು । ಮುನಿಪ ಸಮ್ಮತಿಸಿದಾಹ್ನಿಕವ ತೀರಿಸಲು ॥ ೩ ॥ ಪರಿಪರಿ ತಿನಿಸನು ಕೃತ್ರಿಮ ದ್ವಿಜನು । ನರಮಾಂಸದಿಂ ಕೂಡ ಭೋಜ್ಯ ಮಾಡಿದನು ॥ ೪ ॥

ಭಾಮಿನಿ

ನರಪ ಮುನಿವರನನ್ನು ವಿನಯದಿ । ಕರೆದು ಮಂದಿರಕನ್ನವಿಕ್ಕಿಸಿ । ಯರಸಿ ಯೊಡನುಪಚರಿಸಿ ಹಸ್ತೋದಕವ ನೀಡಿದನು ॥ ನರರ ಮಾಂಸದ ಭೋಜ್ಯ ನೋಡುತ । ಪುರವ ದಹಿಸುವ ರುದ್ರನಂದದಿ । ನರಪತಿಯ ಕಾಣುತ್ತ ಋಷಿ ವರ ಜರೆದು ಪೇಳಿದನು ॥ ೧ ॥

ರಾಗ ಮಾರವಿ—ಏಕತಾಳ

ಗುರುವಿಗೆ ದ್ರೋಹವ ಬಗೆದ ನರಾಧಮ । ತೋರಿದೆಯ ಮತಿಯನ್ನು ॥ ನರಮಾಂಸವನುಣಿಸಲು ಹವಣಿಸಿ ನೀ । ಸರಿಸಿದೆ ಧರ್ಮವನು ॥ ೧ ॥ ನರ ಪತಿ ಶರ್ಯಾತಿಯು ಮಾಂಧಾತನು । ವರಭೂಸುರರನ್ನು ॥ ಪರಿಚರಿಸಿರುವೀ ವಂಶದಿ ಜನಿಸಿದೆ । ನರಪಾತಕಿ ನೀನು ॥ ೨ ॥ ಉತ್ತಮ ಹಂಸಗಳೆಡೆಯೊಳು ಕಾಗೆಯು । ಕತ್ತೆಯು ಮೃಗಗಳೊಳು ॥ ಮುತ್ತುವಜ್ರಗಳಲಿ ಕಲ್ಲಿನಂತುದಿ ಸಿದ- । ಸತ್ತಮ ರಾಜರಲಿ ॥ ೩ ॥ ಸುಡುವೆನು ಮೂರು ಜಗಂಗಳ ತಡೆ ಯುವ । ಮೃಡನನು ಲೆಕ್ಕಿಸೆನು ॥ ಬಡಿವೆ ಯಮನ ಕಂಗೆಡಿಸೆನು ಸುರಪನ । ಬಡ ಮುನಿಯೇ ನಾನು ॥ ೪ ॥

ಕಂದ

ಸೂಸುತ ಕಣ್ಣಿಂ ಕಿಡಿಯನು । ಋಷಿವರನಬ್ಬರಿಸೆ ಗುರುವಿನಡಿದಾವರೆಗಂ॥ ವಸುಧಾಧಿಪ ತಲೆಬಾಗಿಸಿ । ಯುಸಿರಿದ ಮನ್ನಿಸಿರೆನುತ್ತ ದೀನತೆಯಿಂದಂ ॥ ೧ ॥

ರಾಗ ಕೋರೆ—ಅಷ್ಟತಾಳ

ಗುರುವರ್ಯ ಕೋಪವೇಕೆ । ಶಿಷ್ಯನ ಮೇಲೆ । ಬರಿದೆಯೀ ರಭಸವೇಕೆ ॥ ಕರುಣಾಸಾಗರನಿಂದು ಬತ್ತಿ ಹೋದುದೆ ಚಂ । ದಿರನಿಂದ ವಿಷವು ಚಂದನದಿಂ ಕಿಚ್ಚುದಿಸಿತೆ ॥ ೧ ॥ ಅಪರಾಧಗೈಯುವೆನೆ । ಮುನೀಶನೊಳ್ । ಚಪಲತೆ ತೋರುವೆನೆ ॥ ತಪವೇ ಜೀವಿತವಾಗಿ ಪರಹಿತ ಬಯಸುವ । ತಪನ ವಂಶದ ಮೇಲ್ಮೆ ಸಾಧಿಪ ಮಹಿಮರ್ಗೆ ॥ ೨ ॥ ನರಮಾಂಸವೆಂತು ಬಂತು । ಪಾಚನ ಕಿಂದು । ಅರಿಯೆ ಯೋಚಿಸಿದರಿಂತು ॥ ಇರುವರು ವಿಪ್ರಪಾಚಕರು ವಿನೀತರು । ಪರಮ ಸಾತ್ವಿಕ ಶಾಂತ ಕರ್ಮವಿಶುದ್ಧರು ॥ ೩ ॥

ರಾಗ ಕಾಂಬೋದಿ—ಝಂಪೆತಾಳ

ಮುಚ್ಚು ಬಾಯನು ಪಾಪಿ ಗೋಮುಖವ್ಯಾಘ್ರನೀ । ಮಚ್ಚರದಿ ಧರ್ಮ ಕೆಡಿಸುವೆಯ ॥ ಹೆಚ್ಚು ವಿನಯವ ತೋರಿಯೀಗೆನ್ನ ಮನವನ್ನ । ಸಚ್ಚರಿತ ಪೊಲಿಸಬಯಸುವೆಯ ॥ ೧ ॥ ತಿಳಿನೀರ ತೋರಿ ಮಧ್ಯದಿ ಮಕರವಡಗಿಸಿದ। ಕೊಳದಂತೆ ಕಾಣುತಿಹ ದುಷ್ಟ ॥ ಮಲಗಿರ್ದ ಕೇಸರಿಯ ಕೇಸರವನೆಳೆದು ನೀ । ಕುಲನಾಶ ಮಾಡಿಸಿದೆ ವ್ಯರ್ಥ ॥ ೨ ॥ ನರಮಾಂಸವನು ತಿನ್ನಿಸಲು ಯತ್ನಿಸಿದ ಧೂರ್ತ । ತೊರೆದು ರಾಜ್ಯದ ಭೋಗಭಾಗ್ಯ ॥ ಚರಿಸುತಾರಣ್ಯದಲಿ ಭುಜಿಸುತ್ತ ಮಾಂಸವ । ನ್ನಿರು ಹೀನ ರಾತ್ರಿಚರನಾಗಿ ॥ ೩ ॥

ಕಂದ

ಅಂದಾ ಶಾಪದ ನುಡಿಯಿಂ । ನ್ನಿಂದೀವರನಯನೆ ಸಿಡಿಲು ಬಡಿದಂತಾಗಳ್॥ ಬೆಂದಿಹ ನವಲತೆಯಂದದಿ । ಕಂದುತ ಕುಂದುತ ಮರುಗುತ ಕಣ್ಣೀರ್ಗರೆದಳ್ ॥ ೧ ॥

ರಾಗ ನೀಲಾಂಬರಿ—ರೂಪಕತಾಳ

ಹರಸರ್ವೇಶ್ವರ ಭಕ್ತರ । ಪೊರೆಯುವ ದೀನದಯಾಕರ । ಮರೆತೆಯ ಯಿಂದಿಗೆ ಯೆಮ್ಮನು । ದುರಿತವಿದೂರಕನೆ ॥೧॥ ಏತಕೆ ಮನುಜರ ಮಾಂಸವು।

ಪಾತಕಗೈಸುವರ್ಯೆದಿತೊ । ಏತಕೆ ಮುನಿ ಮುನಿದನೊ ಜನ । ಸಾಧಸಿಗೀ ಗತಿಯೆ ॥ ೨ ॥ ಮನುಕುಲ ದೀಪವು ನಂದಿತೆ । ಜನಭಾಗ್ಯದ ನಿಧಿ ಕಳೆಯಿತೆ। ಮನುಜರ ಲೋಕಕೆ ಸುಖ ಸಾ। ಧನವಿಲ್ಲದೆ ಹೋಯ್ತೆ ॥ ೩ ॥

ರಾಗ ಆನಂದಭೈರವಿ—ಏಕತಾಳ

ಗೋತ್ರವನ್ನು ಬೆಳಗುವಂಥ । ಪುತ್ರನನ್ನು ಪಡೆಯದೆಂತು । ಬಾಳ್ವೆನು । ದುಃಖ । ತಾಳ್ವೆನು ॥ ೧ ॥ ಸಣ್ಣಮಗುವ ಲೀಲೆಯನ್ನು । ಚಿಣ್ಣನಪ್ಪಿಕೊಂಬು ದನ್ನು । ಹೊಂದೆನು । ಇನ್ನು । ನೊಂದೆನು ॥ ೨ ॥ ಜೀವನ ಸರ್ವಸ್ವವಾದ । ಪಾವನಾತ್ಮಪತಿಯನೆಂತು । ತೊರೆವೆನು । ಬಾಳಿ । ಇರುವೆನು ॥ ೩ ॥

ಭಾಮಿನಿ

ಧಾರಿಣೀತಲದಲ್ಲಿ ಬಾಷ್ಪದ । ಧಾರೆಯನು ಸುರಿಸುತ್ತ ಮರುಗುವ । ಸಾರ ಸಾಂಬಕಿಯನ್ನು ಸಂತೈಸುತ್ತ ನರಪತಿಯು ॥ ಭೂರಿ ರೋಷವ ತಾಳಿ ವಿನ ಯವ । ಮೀರಿದಪರಾಧವನು ಮುನಿಪತಿ । ಹೇರಿಸಿದನೆಂದೆನುತ ಕೆಂಗಿಡಿ ಸೂಸುತಿಂತೆಂದ ॥ ೧ ॥

ರಾಗ ಭೈರವಿ—ಏಕತಾಳ

ಎಲವೋ ಮದಗರ್ವಿತನೇ । ರವಿ । ಕುಲವನು ಕೆಡಿಸಿದ ದ್ವಿಜನೇ ॥ ಹೊಲೆ ಕೋಪವು ಮುನಿವರಗೆ । ನೀ । ಸಲೆ ತಿಳಿದೆಯ ಹೀಗೆಸಗೆ ॥ ೧ ॥ ನರಮಾಂ ಸವನುಣಿಸುವೆನೇ । ಭೂ । ಸುರರನು ಪೂಜಿಸುವವನೇ ॥ ಅರಿಯದೆಪೋದೆಯು ಯೆನ್ನ । ನೀ । ಹರಿಸಿದೆ ಜೀವನವನ್ನ ॥ ೨ ॥ ಗುರುಸೇವಾವೃತಿಯಂದು । ದನ । ತರಿದಿಹ ಬಗ್ಗವಸೆಂದು ॥ ನರಪಾಲಕ ವೃಷದ್ರಥನು । ವಿಧಿ । ಪರನನು ಶಪಿಸಿದೆ ನೀನು ॥ ೩ ॥ ಸತ್ಯಾಹಿಂಸೆಗಳಿಂದ । ಆ । ದಿತ್ಯಸಮರ್ಚನೆಯಿಂದ ॥ ನಿತ್ಯಸುಪಾವನನೆಂದು । ನಾ । ಭೃತ್ಯನಾದ್ದು ಬರಿದಿಂದು ॥ ೪ ॥ ಹವನ ದಾನ ತಪದಿಂದ । ಭೂ । ದಿವಿಜ ಶಿವಾರ್ಚನೆಯಿಂದ ॥ ಭುವನದಿ ಪಡೆದಿಹ ಶಕ್ತಿ । ತೋ । ರುವೆ ಪಡೆ ಕರ್ಮವಿಭುಕ್ತಿ ॥ ೫ ॥ ಎಂದು ಮಂತ್ರಜಲವನ್ನು । ಕೈ । ಯಿಂದ ಧರಿಸೆ ಕಂಡದನು ॥ ಮುಂದಗಮನೆ ಶಪಿಸುವುದು । ಬೇ । ಡೆಂದುಸಿ ರಿದಳವಗಂದು ॥ ೬ ॥

ರಾಗ ನೀಲಾಂಬರಿ—ಏಕತಾಳ

ಏತಕಿಂತು ಗೈವೆಯೆನ್ನ । ಪ್ರಾಣಕಾಂತ । ಗುರುದೇವನಿಂಗೆ । ನೀತಿ ಬಿಟ್ಟು

ಶಪಿಸುವೇಕೆ । ಪ್ರಾಣಕಾಂತ ॥ ಪಾತಕವಿದು ನರಕಮಾರ್ಗ । ಪ್ರಾಣಕಾಂತ। ಇನವಂಶಜಾತ । ಖ್ಯಾತಿ ಮಸುಳಿ ಪೋಪುದಲ್ಲ। ಪ್ರಾಣಕಾಂತ ॥ ೧ ॥ ಸಾಮ ಹಿತವು ಮನುಜನಿಂಗೆ । ಪ್ರಾಣಕಾಂತ । ಈ ಕೋಪವೈಸೆ। ತಾಮಸಿಕವು ದುಃಖದಾಯಿ। ಪ್ರಾಣಕಾಂತ ॥ ನಾಮ ನಿನ್ನದರ್ಥಹೀನ। ಪ್ರಾಣಕಾಂತ। ಗುಣರತ್ನಜಲಧಿ। ಭೂಮಿಯಲ್ಲಿಯಾಗದಿರಲಿ। ಪ್ರಾಣಕಾಂತ ॥ ೨ ॥ ತ್ರಿವಿಧ ವರ್ಣಜಾತರಿಂಗೆ । ಪ್ರಾಣಕಾಂತ । ಅತಿ ಪೂಜ್ಯರೆಂದು। ಬುವಿಯ ಬಲ್ಲ ಬುಧರ ಮತವು। ಪ್ರಾಣಕಾಂತ॥ ಭುವನದೇವರೆಂಬ ಖ್ಯಾತಿ। ಪ್ರಾಣಕಾಂತ। ದ್ವಿಜವರ್ಯರಿಂಗೆ। ಭುವನದಲ್ಲಿ ಸಿದ್ಧವಿಹುದು। ಪ್ರಾಣಕಾಂತ ॥ ೩ ॥ ವೇದ ವೇತ್ತರಲ್ಲಿ ಶ್ರೇಷ್ಠ । ಪ್ರಾಣಕಾಂತ। ಗುರು ಮಾನ್ಯನಾದ । ಸಾಧಕಾಗ್ರಗಣ್ಯ ಮುನಿಪ। ಪ್ರಾಣಕಾಂತ ॥ ಭೇದವಿಲ್ಲದೆಮ್ಮ ಕುಲದ। ಪ್ರಾಣಕಾಂತ।ಉದ್ಧಾ ರವನ್ನು। ಗೈದ ಬುಧನ ಶಪಿಸಬೇಡ। ಪ್ರಾಣಕಾಂತ ॥ ೪ ॥

ಭಾಮಿನಿ

ಓತು ಕಾಂತಾಮಣಿಯು ಪೇಳಿದ। ನೀತಿ ತತ್ವದ ಮಾತುಗಳ ಭೂ। ನಾಥ ನಾಲಿಸಿ ಮನದಿ ಗ್ರಹಿಸಿದ ಕೋಪವನು ತ್ಯಜಿಸಿ ॥ ಪೂತವಾಗಿಹ ಮಂತ್ರವಾ ರಿಯ। ನಾತನೆಲ್ಲಿಗೆ ಬಿಡುವೆನೆನ್ನುತ । ಭೂತ ಕರುಣಾಕರನು ನಿಜಪದಗಳಿಗೆ ಸುರಿಸಿದನು ॥ ೧ ॥

ವಾರ್ಧಿಕ

ಭೂಮಿಪತಿ ಕಾಂತೆಯರ ಸಾತ್ವಿಕ ವ್ಯವಹಾರ। ವಾ ಮಹಾ ಮುನಿಪತಿಯ ಕೋಪವನು ಕರಗಿಸಲು । ನಾಮುಪರಿಶುದ್ಧ ಸತ್ಯಾಚಾರ ಸಂಪನ್ನನಾದ ಯೀ ಮಹಿಪನಿಂಗೆ ॥ ಯಾಮಿನೀಚರನಾಗಿ ಪೋಗೆಂದು ಶಪಿಸಿದೆನೆ। ಭಾಮಿನಿಯು ಮರುಕವನು ನಾನೆಂತು ಕಾಣುವೆನು। ನೇಮದಿಂದಿಹ ತನ್ನ ಧವಲಕೀರ್ತಿಯು ಮಸುಳಿ ಪೋದುದೇ ಶಿವಯೆಂದನು ॥ ೧ ॥

ರಾಗ ಸಾವೇರಿ—ರೂಪಕತಾಳ

ಇನಕುಲಾಬ್ಧಿ ಚಂದ್ರ ನಿನ್ನ । ವಿನಯಪೂರ್ಣ ಗುಣಗಳನ್ನು। ನೆನೆಯು ತಿರುವೆ ಸುಮ್ಮನಿತ್ತೆ। ನಿನಗೆ ಶಾಪವ ॥ ೧ ॥ ಶಿವನಲೀಲೆ ಪ್ರಬಲ ಸಾಧ್ವಿ। ಬುವಿಯ ತೆರದಿ ಸಹನಶೀಲೆ । ಸವಿತೃಕುಲದ ಶಮಿಸಿಯುರಿಯ । ಜವದಿ ಮೆರೆದಳು ॥೨॥ ಶಾಪಕೊಡಲು ಪಿಡಿದ ಜಲವ। ತಾಪಗೊಂಡು ಕಾಲಿಗೆರೆದು।

ಭೂಪಕಲ್ಮಷಾಂಘ್ರಿಯಿಂದು। ಛಾಪು ಮೆರೆದೆಯು ॥ ೩ ॥ ಕೊಟ್ಟ ಶಾಪ ಹರಿಸ ಲಾರೆ। ದಟ್ಟ ಕಾಡಿನಲ್ಲಿ ಕಳೆಯು। ಕೆಟ್ಟಕಾಲ ದ್ವಾದಶಾಬ್ದ। ಸೃಷ್ಟಿಪಾಲಕ ॥ ೪ ॥ ಬರುವ ತನಕ ರಾಜ್ಯವನ್ನು। ಪೊರೆಯುತಿರಲಿ ಮಂತ್ರಿವರರು। ಕೊರತೆ ಯಾಗದಂತೆ ನಾನು। ನರಪ ಕಾಂಬೆನು ॥ ೫ ॥

ರಾಗ ಮಧ್ಯಮಾವತಿ—ಏಕತಾಳ

ಮುನಿಕುಲಶೇಖರ ಪದಕೆರಗುವೆ ನಾನು। ಮುನಿದಪರಾಧವ ನಿಮಗೆ ಮಾಡಿದೆನು॥ ಮನದ ಕಾಲುಷ್ಯವ ತೊರೆದು ದಯಮಾಡಿರಿ। ವನಜಮುಖಿಯು ಪುತ್ರಿಯಂತೆ ಪಾಲಿಸಿರಿ ॥ ೧ ॥ ಮೊದಲ ಜನ್ಮದ ಪಾಪ ಪರಿಪಾಕದಿಂದ। ಒದಗಿತು ದುರ್ಗತಿ ವಕ್ರವಿಧಿಯಿಂದ ॥ ಒದುಕಿನ ಭಾಗ್ಯವು ತೆರೆಯುವ ತನಕ। ಮುದದಿಂದ ಸಲಹಿ ರಾಜ್ಯಕೆ ಬರುವನಕ ॥ ೨ ॥ ಬಳಿಕ ಸೌದಾಸನು ಕಂಬನಿ ಯೊರಸಿ। ನಳಿನಾಕ್ಷಿಯನು ಬೇಗ ಸಾಂತ್ವನಗೊಳಿಸಿ ॥ ತಿಳಿವನು ಸಂತಪ್ತ ಸಚಿವಾದ್ಯರಿಂಗೆ। ತಿಳಿಸಿ ಬೀಳ್ಕೊಂಡನು ಕಾಂತಾರದೆಡೆಗೆ ॥ ೩ ॥

ರಾಗ ಸೌರಾಷ್ಟ್ರ—ತ್ರಿವುಡೆತಾಳ

ಜನಪ ಶಾಪದ ಬಲುಮೆಯಿಂದಲಿ। ಕುಣಪ ಭೋಜಕನಾಗಿ ತೆರಳುತ। ಬನಕೆ ಬನದಿಂ ಚರಿಸಿ ನೋಡಿದ। ಬನದ ವಿಭವ ॥ ೧ ॥ ಬಲದ ಗರ್ವದಿ ಮುರಿದ ಹೆಮ್ಮರ। ವಳೆಯುತೇರಿದ ಪರ್ವತಗಳನು। ತುಳಿದು ಕೆಡಹಿದ ಬಂಡೆ ಕಲ್ಗಳ। ನಿಳಿದ ಗುಹೆಗೆ ॥ ೨ ॥ ಪಿಡಿದು ಹೆಬ್ಬುಲಿಗಳನು ಕೊಂದನು। ಪಡೆದು ಚರ್ಮವನುಟ್ಟುಕೊಂಡನು। ಕೆಡೆದು ಗಜಗಳ ರಕ್ತಮಾಂಸವ। ಪಡೆದು ತಿಂದ ॥ ೩ ॥ ನೀರಿಗಿಳಿಯುತ ಕಲಕಿ ಕೆರೆಯನು। ಸೇರಿ ಬಯಲನು ಗಾಳಿಯಲಿ ದಣು। ವಾರಿಸುತ ಸಮ್ಮೋದದಿಂದ ವಿ। ಹಾರಗೈದ ॥ ೪ ॥

ಭಾಮಿನಿ

ಮನವ ಮೋಹಿಪ ಕುಸುಮನಿಕರವು। ತಿನಿಸಿಗಾಗಿಹ ಫಲಸಮೂಹವು। ತೊನೆದು ಬಾಗುವ ಮರಗಳಿರುತಿಹ ಗಿರಿಯ ತಪ್ಪಲಲಿ ॥ ಮುನಿಪ ಶಾರ ದ್ವತನು ತನ್ನಯ। ವನಜಲೋಚನೆಯೊಡನೆ ಬಾಳುತ। ವನದಿ ಹವನಾದಿಗಳ ಚರಿಸುತಲಿರ್ದ ನಿಯಮದಲಿ ॥ ೧ ॥

ರಾಗ ಬೇಹಾಗ್—ತ್ರಿವುಡೆತಾಳ

ಒಂದು ದಿನ ಸತಿ ವಿಮಲೆ ಮನದೊಳು। ಹೊಂದಿ ದುಗುಡವ ಪತಿಯು

ಬಳಿಗೈ । ತಂದು ಚರಣಕೆ ನಮಿಸಿ ನಿಂದಳು । ಮಂದಗಮನೆ ॥ ೧ ॥ ಕಂದಿ ದಾನನ ನೋಡಿ ಮುನಿವರ । ನೊಂದ ಹೃದಯವದೇಕೆಯೀ ಪರಿ । ಯಿಂದ ನೊಂದಿತು ಪೇಳುಪೇಳೆಲೆ । ಕುಂದರದನೆ ॥ ೨ ॥ ಇನಿಯ ಪೇಳುವದೇನು ನೀನೇ । ಮನದಿ ಯೋಚಿಸು ನಾರಿಹೃದಯವ । ನೆನಿತು ಕಾಲದಿ ಸಂದಿತೀ ಜೀ । ವನವು ಬರಿದೆ ॥ ೩ ॥ ಕಾಂತೆ ವೈದಿಕ ವಿಧಿವಿಧಾನದಿ । ಕಂತುಪಿತನನು ಭಜಿಸಿ ಸಂಯಮ । ವಂತರೆನಿಸುತ ಬಾಳುತತಿ ಸುಖ । ವಾಂತೆವೈಸೆ ॥ ೪ ॥ ನಲ್ಲ ನಮ್ಮಯ ಪ್ರೇಮವಲ್ಲಿಯು । ಸಲ್ಲಲಿತವಾಗೆಸೆದು ಬೆಳೆಯಿತು । ಪಲ್ಲವಿಸಿ ಹೂ ಬಿಟ್ಟಿತಾದರು । ಇಲ್ಲ ಫಲವು ॥ ೫ ॥ ಜೀವನಗೆರಡನೆ ಜನ್ಮಭೇದವು । ಜೀವನದ ಸಾರ್ಥಕ್ಯ ನಿನ್ನನು । ಸೇವೆಗೆಸುತಲಿ ವರಿಸಿ ತಪವನು । ಗೈವೆ ರನ್ನೆ ॥ ೬ ॥ ಸುತನೆಯಿಹಪ ಪರಸೌಖ್ಯ ಕಾರಣ । ಸುತನೆ ಜೀವನ ತಾಪವಾರಣ । ಸುತನೆ ಶ್ರೇಯೋಮಾರ್ಗ ಸಾಧನ । ಸುತನೆ ಗತಿಯು ॥ ೭ ॥

ರಾಗ ಸಾಂಗತ್ಯ—ರೂಪಕತಾಳ

ಸಣ್ಣಕುಮಾರನ ಮೊಗವನ್ನು ಕಾಣದ । ಕಣ್ಣುಗಳಿರಲೇನು ಫಲವು ॥ ಚಿಣ್ಣನನಪ್ಪಿಕೊಳ್ಳದ ತೋಳುಗಳು ದಿಟ । ತಿಣ್ಣವಾಗಿರುವ ಕಾಷ್ಟಗಳು ॥ ೧ ॥ ಒಸರುವ ಜೊಲ್ಲಿನಿಂದೆಸೆವೆಳೆ ತುಟಿಗಳ । ರಸವನ್ನು ಸವಿಯುವೆನೆಂದೋ ॥ ಎಸಳುಗಂಗಳ ಕಾಂತಿ ಮಿರುಗುವ ಮೆಲುನಗೆ। ಪಸರಿಪ ಸೊಗವನೆಂದುಣುವೆ ॥ ೨ ॥ ಎಂದು ಸಂತಾನದ ಹಂಬಲದಿಂದಲಿ । ಬೆಂದೊಡಲಾಕೆಯ ಮುನಿಪ ॥ ಕುಂದದೆ ಸುರಿಯುವ ಕಂಬನಿಯೊರಸುತಿಂ । ತೆಂದನಾ ಚಪಲಾಕ್ಷಿಯೊಡನೆ ॥ ೩ ॥ ವ್ರತವುಪವಾಸವ ಚರಿಸುತ್ತ ಲಕ್ಷ್ಮಿಯ । ಪತಿಯ ಸಮರ್ಚನೆಯೆಸಗು ॥ ಅತಿಹಿತ ಭಕ್ತಿಯಿಂದಾಮೋದಗೊಂಡು ಸಂ । ತತಿಯನ್ನು ದಯಪಾಲಿಸುವನು ॥ ೪ ॥

ಭಾಮಿನಿ

ಎಂದು ಯತಿಪತಿ ಸತಿಗೆ ಶಾಂತಿಯ । ಹೊಂದಿಸುತ ಕೆಲಕಾಲ ಶ್ರೀ ಗೋ । ವಿಂದನನು ಭಜಿಸುತ್ತಲಿರ್ದನು ಭಕ್ತಿಯುತನಾಗಿ ॥ ಒಂದು ದಿನ ನಿಶೆಯಂತ್ಯ ಕಾಲದೊ । ಳಿಂದುವದನೆಯು ಕಂಡು ಸ್ವಪ್ನವ । ಹೊಂದಿ ದುಃಖದೊಳಿರಲು ಕೇಳಿದ ಮುನಿಯು ಕಾರಣವ ॥ ೧ ॥

ರಾಗ ಕೇದಾರಗೌಳ—ಅಷ್ಟತಾಳ

ತಿಳಿಸೆನ್ನ ಮನದನ್ನೆ ತಿಳಿನಗೆ ಕಾಣೆ ನಾ । ಕಳವಳಗೊಂಡೆಯೇಕೆ ॥ ನಳಿನಾಕ್ಷಿಧ್ಯಾನದಿ ಬಾಳಿಗೆ ಶಾಂತಿಯು । ತಿಳಿಯದೆ ನೋಯುವೇಕೆ ॥ ೧ ॥ ಎರೆಯ ಪೇಳುವದೆಂತು ಥರಥರ ನಡುಗುವೆ । ಗುರುತರ ಸ್ವಪ್ನ ನೋಡಿ ॥ ಹರಣಕೆ ಹಾನಿಯನ್ನರಿವುತ ಮನದಲಿ । ಮರುಗುವೆ ದುಃಖಕೂಡಿ ॥ ೨ ॥ ಇರುಳಂತೆ ಕರಿದಾದ ಘೋರ ರೂಪಿನ ಭೂತ । ಕೊರಳಿನ ಮಾಂಗಲ್ಯವ ॥ ಕರದಿಂದ ಸೆಳೆದು ವಿಕಾರದಿ ನಕ್ಕಿತು । ಕರಕರಿಸುತ್ತಿಹೆನು ॥ ೩ ॥ ಎರೆಯಳೆ ಭಯಗೊಳ್ಳದಿರು ಸರ್ವ ಕಷ್ಟವ । ಹರಿನಾಮ ತೊಡೆಯುವುದು ॥ ದುರಿತವ ದೂರೀಕರಿಸಲು ಹೋಮವ । ವಿರಚನೆಗೈಯ್ಯುವುದು ॥ ೪ ॥ ಹೋಮಕೆ ಬೇಕಾದ ಸಮಿಧೆಯ ತರುವರೆ । ಸ್ವಾಮಿಯು ತೆರಳುತಿರೆ ॥ ಭಾಮಿನಿ ಸ್ನಾನಾದಿ ನೇಮವಗೈದಳು । ಕ್ಷೇಮವ ಸಾಧಿಪರೆ ॥ ೫ ॥

ರಾಗ ಸೌರಾಷ್ಟ್ರ—ತ್ರಿವುಡೆತಾಳ

ಇತ್ತ ರಾಕ್ಷಸನಾದ ಭೂಮಿಪ । ಸುತ್ತಿ ವನದಲಿ ಪ್ರಾಣಿಜಾತದ । ಕತ್ತುಮುರಿಯುತ ತಿನ್ನುತಿದ್ದನು । ಮತ್ತನಾಗಿ ॥ ೧ ॥ ಅಂದು ಕಾಡಿನೊಳಲೆದು ನೋಡಿದ । ರೊಂದು ಮಿಗವೂ ಖಗವು ದೊರಕದೆ । ಬೆಂದವೊಡಲಿಂ ಬನಕೆ ಬನದಿಂ । ಬಂದನಾಗ ॥ ೨ ॥ ಕುಡಿವೆನೋ ಸಪ್ತಾಂಬುನಿಧಿಯನು । ಹಿಡಿವೆನೋ ಸಪ್ತಾದ್ರಿಯೆನ್ನುತ । ಗುಡುಗಿದನು ಬ್ರಹ್ಮಾಂಡಗರ್ಭವು । ಕೆಡೆಯುವಂತೆ ॥ ೩ ॥ ರೇಗಿ ತನ್ನೊಳು ತಾನೆ ಹಸಿವೆಗೆ । ಸಾಗಿ ಗಿರಿವನ ಮಾರ್ಗದಿಂಬಿರು । ಸಾಗಿ ತಿನಿಸನ್ನರಸುತಾಶ್ರಮ । ಕಾಗಮಿಸಿದ ॥ ೪ ॥

ಕಂದ

ಹೋಮದ ಪರಿಕರ ನೆರವಿಪ । ಭಾಮಿನಿ ರೂಪದಿ ತನ್ನಯ ಮನವನು ಸೆಳೆದುಂ ॥ ಕಾಮದ ಬಲೆಯುಲಿ ಸಿಲುಕಿಸೆ । ಕಾಮಿನಿಯುಂ ಸಲೆ ನಿರುಕಿಸಿ ತನ್ನೊಳಗೆಂದಂ ॥ ೧ ॥

ವಾರ್ಧಿಕ

ಅರವಿಂದವದನದಿಂ ಶೈವಾಲಕೇಶದಿಂ । ಮಿರುಗುತಿಹ ನೇತ್ರಂಗಳೆಂಬ ಮೀನಂಗಳಿಂ । ಗುರುಪಯೋಧರ ಚಕ್ರವಾಕಂಗಳಿಂ ಬಾಹು ಮೃದುಸರಸ ಬಿಸಗಳಿಂದ ॥ ಕರಯುಗಲ ಕಮಲದಿಂ ಚಾರುವಲಿ ಭಂಗದಿಂ । ಪರಿಶೋಭಿ

ಸುವ ನಾಭಿಯೊಂದೆನಿಪ ಸುಳಿಯಿಂದೆ । ಮೆರೆಯುತಿಹ ಲಾವಣ್ಯ ಜಲದಿಂದ ಕೂಡಿರ್ದು ತೋರುವಳು ಸರಸಿಯಂತೆ ॥ ೧ ॥

ಕಂದ

ಎನುತೀ ಪರಿಯಂ ಚಂದ್ರಾ । ನನೆಯಂ ನಿರುಕಿಸುತ ಸೊಬಗ ಬಣ್ಣಿಸುತವನುಂ ॥ ಸನಿಹವ ಸೇರುತ ಮೋಹದಿ । ಮುನಿವಧುಗೆಂದಂ ವಶಪಡಿಸುವ ನೆವದಿಂದಂ ॥ ೧ ॥

ರಾಗ ಕೇದಾರಗೌಳ—ಅಷ್ಟತಾಳ

ಸಾರಸಾಂಬಕಿ ನೀನು ಯಾರು ಗೈಯ್ಯುವೆಯೇನು । ಮಾರನ ಶಬರಿಯಾಗಿ ॥ ಸೇರಿ ಕಾನನವನ್ನು ಮೋಹದ ಬಲೆಯನ್ನು । ಬೀರುತ್ತ ಸೆರೆಗೈವೆಯ ॥ ೧ ॥ ಸುರರ ಸುಂದರಿಯೊ ಗಂಧರ್ವಕಾಮಿನಿಯೊ ಕಿ । ನ್ನರರ ಭಾಮಿನಿಯೊ ಪೇಳು ॥ ಗರುಡರ ಸತಿಯೊ ಮೇಣುರಗರ ವಧುವೊ ಕಿಂ । ಪುರುಷಾಂಗನಾಮಣಿಯೊ ॥ ೨ ॥ ಮಾರನ ಶರವಿಷ ಸೇರಿಯೆನ್ನಂಗದ । ಸಾರ ಕುಂದಿಸುತಿಹುದು ॥ ನೀರೆ ನಿನ್ನಾನನಸುಧೆಯನೀಂಟಿಸುತ ಶ । ರೀರವನುಳಿಸುವೆಯ ॥ ೩ ॥ ಎನೆ ಮುನಿಪತ್ನಿಯು ತಲೆಯನೆತ್ತುತ ನೋಡಿ । ಮನದಲ್ಲಿ ಯೋಚಿಸುತ ॥ ಜನಪ ಶಾಪದಿ ನಿಶಿಚರನಾದ ಪರಿಯನ್ನು । ನೆನೆಸುತ್ತ ಹೀಗೆಂದಳು ॥ ೪ ॥

ರಾಗ ಬೇಹಾಗ್—ಅಷ್ಟತಾಳ

ಮುನಿಪ ಶಾರದ್ವತನಾಶ್ರಮವಿದುಯೀಗ । ವನಕಾಗಿ ಪೋಗಿಹನು ॥ ಮುನಿಪನ ಧರ್ಮಪತ್ನಿಯು ವಿಮಲೆಯೆಂದು । ಜನರೆನ್ನ ಕರೆಯುವರು ॥ ೧ ॥ ನೀತಿಯ ತ್ಯಜಿಸಿದ ವರ್ತನೆಯಲ್ಲದೆ । ರೀತಿಯಿಲ್ಲದ ವಚನ ॥ ಪ್ರೀತಿರಹಿತ ದಾಂಪತ್ಯವು ಜನರಿಗೆ । ಖ್ಯಾತಿಹರಣ ಕಾರಣ ॥ ೨ ॥ ಪರನಾರಿಯನು ಮಾತೃಭಾವದಿ ಕಾಂಬುದೆಂ । ದೊರೆಯುತಿಹುದು ವೇದವು ॥ ನರನಾಥ ನೀನಾಗಿ ಧರ್ಮ ಮೀರಿದರಾವು । ನರರೆಂತು ಬಾಳುವೆವು ॥ ೩ ॥

ರಾಗ ಕಾಂಬೋದಿ—ಝಂಪೆತಾಳ

ಸತಿಯು ನುಡಿ ಕೇಳಿ ನಿಶಿಚರನಾಗ ಖತಿತಾಳಿ । ಜೊತೆಗೆನ್ನ ಬರಲು ಪೇಳಿದರೆ ॥ ಅತಿಯಾಗಿ ತತ್ತ್ವವನ್ನೊದರುತ್ತ ವಂಚಿಸುವೆ । ಮತಿಹೀನೆಯೆಂದು ಗಜರಿದನು ॥ ೨ ॥ ಅಸಿತರಲ್ಲಿಯೆ ಜೀವಿತೇಶ ಬರುತಿರೆ ಕಂಡು । ವನಜಮುಖಿ

ಪೇಳಿದಳು ಹದನ ॥ ಮುನಿಪ ರಾಕ್ಷಸನಿಂಗೆ ಧರ್ಮರತನಾಗೆಂದು । ವಿನೆಯದಿಂ ನೀತಿ ಪೇಳಿದನು ॥ ೨ ॥ ಕಾನನದಿ ಶಾಂತಿಯಿಂ ಬಾಳುತ್ತ ಶಿವನನ್ನು । ಧ್ಯಾನಿಸುತ ಭಜಿಸುತಿರುವೆಮಗೆ ॥ ಹೀನಮಾರ್ಗವ ಹಿಡಿದು ಪೀಡೆಯನು ಕೊಡುತಿಹುದು । ಮಾನವಂತಗೆ ಯೋಗ್ಯವಲ್ಲ ॥ ೩ ॥ ಬಡ ಪಾರ್ವ ಸಾಕು ನಿನ್ನಯ ಬರಡು ವೇದಾಂತ । ತಡೆಹಿಡಿದುಕೊಳ್ಳು ನಾಲಿಗೆಯ ॥ ಮೃಡನು ಬಂದರು ಬರಲಿ ಲೆಕ್ಕಿಸೆನು ಬಲದಿಂದ । ನಡೆಸದಿರೆನೆನ್ನ ಮನದಿರವ ॥ ೪ ॥ ಮೂರು ದಿನದಿಂದೆನ್ನ ಪೊಡಲಿಗನ್ನವು ಸಿಗದೆ । ಭೂರಿಕ್ಷುಧೆಯನು ತಾಳ್ದು ನೊಂದೆ ॥ ಕೂರಸಿಯ ಬೀಸಿಯಾಘಾತಿಸುತ ರುಧಿರವನು । ಹೀರಿ ಜಠರಾಗ್ನಿ ನಂದಿಸುವೆ ॥ ೪ ॥ ಕಂದುಗೊರಳನ ಫಾಲನೇತ್ರನನು ಕೀಳ್ವೆ ಬಲು । ಹಿಂದ ತಡೆವವರಾರು ಜಗದಿ॥ ಎಂಥು ಮುನಿಕಂಥರವ ಪಿಡಿಯುತಿರೆ ವಿಮಲೆ ಬಲು। ನೊಂದು ತಡೆದಾಗ ಪೇಳಿದಳು ॥ ೬ ॥

ರಾಗ ರೇಗುಪ್ತಿ—ತ್ರಿವುಡೆತಾಳ

ಬೇಡಬೇಡೀ ಹದನ । ಸಲ್ಲದ ಕಾರ್ಯ । ಮಾಡಬೇಡೀ ಹನನ ॥ ಕಾಡಿನೊಳಿಲೆಮನೆ । ಮಾಡಿ ಸದ್ಧರ್ಮದಿ । ಕೂಡಿ ವಾಸಿಪ ಶಂಭು । ಗಾಢ ಭಕ್ತನಿಗೆ ॥ ಬೇಡಬೇಡೀ ॥ ೧ ॥ ಮನುಕುಲ ಭೂಷಣನು । ಧಾರ್ಮಿಕರಾದ । ಮುನಿಗಳ ಪೋಷಕನು ॥ ಕುಣಪಾಶಿ ರೂಪವ । ಮುನಿದ್ರೋಹದಿಂದಾಂತೆ। ನೆನೆದುಕೊ ಸತ್ಯವ । ಮುನಿಯ ನಾಶಿಸದಿರು ॥ ಬೇಡಬೇಡೀ ॥ ೨ ॥ ಪತಿಯೆ ಜೀವನ ಸಾಧನ। ನಾರಿಯರಿಂಗೆ । ಗತಿಯೆಂದು ಶ್ರುತಿವಚನ ॥ ಅತಿದುಃಖ ಕಾರಕ । ಪತಿಹೀನ ಜೀವನ । ಮತಿ ತೊರೆದಕಟ ಭೂ। ಪತಿಯೊದಗಿಸದಿರು॥ ಬೇಡಬೇಡೀ ॥ ೩ ॥

ಭಾಮಿನಿ

ಎಂದು ಬಹುವಿಧದಿಂದ ಮರುಗುತ। ಲಂದು ವಿಮಲೆಯು ರಾತ್ರಿಚರನಿಗೆ। ವಂದಿಸುತ ಪತಿದಾನವನು ನೀಡೆನುತ ಬೇಡಿದಳು ॥ ಎಂದರಾ ದಿತಿತನುಜ ರೋಷದಿ । ಹಿಂದುಮುಂದನು ಯೋಚಿಸದೆ ಜವ । ದಿಂದ ವಿಪ್ರನ ಕೊಂದು ತಿನೆ ಸತಿ ಮೂರ್ಛೆತಾಳಿದಳು ॥ ೧ ॥

ರಾಗ ಭೈರವಿ—ಝಂಪೆತಾಳ

ಬಾರೆ ಮೋಹದ ರಾಣಿ । ಬಾರೆ ಕೋಕಿಲವಾಣಿ । ಬಾರೆ ಪನ್ನಗವೇಣಿ ।

ಚಾರಿ ಸುಶ್ರೋಣಿ ॥ ೧ ॥ ಧರೆಯುಲೀತಕೆ ಕಾಸಿದೆ । ಜಿರಿತು ಬಾ ಬಾಳಿನಲಿ । ಪೊರೆವೆ ಹಿತದಿಂದೆನುತ । ಹರಿಣಾಕ್ಷಿಗೆಂದ ॥ ೨ ॥

ಕಂದ

ಬರಸಿಡಿಲೆರಗಿದ ಬಾಳೆಯು । ಮರದಂದದಿ ಸತಿಯು ಬೀಳೆ ಜಣವನು ಕಳೆದುಂ ॥ ಎದೆಯನ ವಿರಹದ ತಾಪದಿ । ಯುರಿಯುತ ಕಣ್ಣೀರ್ಗರೆಯುತ ಲಳಲಿದಳಾಗಳ್ ॥ ೧ ॥

ರಾಗ ನೀಲಾಂಬರಿ—ರೂಪಕತಾಳ

ಎಲ್ಲಿಗೆ ತೆರಳಿದೆ ಯೆನ್ನಯ । ವಲ್ಲಭ ಮಾನಸ ಮಂದಿರ । ದಲ್ಲಿ ಸೆಯುವ ಚೆಲುಮೂರುತಿ । ಫುಲ್ಲ ಕಮಲನಯನ ॥ ಪೊಲ್ಲದು ಯೇನಸು ಕಂಡಿಹೆ । ನಲ್ಲೆಯು ಕೊರಳಿಗೆ ವಿರಹದ । ಕಲ್ಲನು ಕಟ್ಟುವರೀ ವಿಧ । ದಲ್ಲಿ ಸಿರೈ ಪ್ರಿಯನೇ ॥ ೧ ॥ ರತಿಪತಿಪಿತನನು ಬಾಳಿಸೊ । ಳತಿಹಿತಭಕ್ತಿಯ ಭರದಲಿ । ನುತಿಸಿದ ಮುನಿವರಗೀ ವಿಧ । ಗತಿಯೊದಗಿತೆ ಶಿವನೇ ॥ ಕ್ಷಿತಿಯೊಳು ನೆಲಸಿಪ ಸಕಲರ । ಹಿತವನೆ ಬಯಸುತ ತ್ಯಾಗದ । ಗತಿಯನ್ನಾಂತಿಹ ಯೆಮಗೀ । ಸ್ಥಿತಿ ಸಂಭವಿಸಿದುದೇ ॥ ೨ ॥ ಮರವಾಧಾರವು ಯೆನಿಸಿದ । ಮುರಿಯಲು ಕಾಲದ ಹೊಡೆತಕೆ । ಒರಗುತ ಭೂಮಿಗೆ ಬಳ್ಳಿಯು । ಸೊರಗದೆಯಿಹುದೆಂತು॥ ಕರಿದಾಕಾರದ ರಾಹುವು । ಮಿರುಗುವ ಚಂದ್ರನ ನುಂಗಲು । ಸುರುಚಿರ ಚಂದ್ರಿಕೆ ಬದುಕಿಸೊ । ಳಿರುವ್ರುದೆ ಗಗನದೊಳು ॥ ೩ ॥ ಕುವರನ ಪಡೆಯುವೆ ಜೀವನ । ಸವೆಯುತಲಾಶೆಯುಯಿಂಗಿತು । ಜವಪುರ ಬಾಗಿಲು ಸೇರುವ । ಬವಣೆಯು ಬಂತೈಸೆ ॥ ಶಿವಶಿವ ಹಿಂದಿನದಾಗಿಹ । ಭವದಲ್ಲೆಂತಹ ದುಷ್ಕಾ । ರ್ಯವ ನಾ ಮಾಡಿದೆನೀ ಗತಿ । ಸವನಿಸಿತಿಂದಿನೊಳು ॥ ೪ ॥

ಭಾಮಿನಿ

ದನುಜಪತಿ ನಗುತೆಂದನೇಕೆಲೆ । ಮದನಮೋಹಿನಿ ರೋದಿಸುವೆ ನಾ । ನಿನಗೆ ಗತಿಪತಿಯೆಂದು ತಿಳಿದುಕೊ ಸುಖಿಸು ವಹಿಲದಲಿ ॥ ಎನಲು ಮಾನಿನಿ ರೋಷದಿಂದಲಿ । ತನುವು ಕಂಪಿಸಲಗ್ನಿಶಿಖೆಯೋಲ್ । ಕನಲಿ ಕೆಂಗಿಡಿ ಸೂಸುತೆಂದಳು ಬಾಷ್ಪವಾರುತಿರೆ ॥ ೧ ॥

ರಾಗ ಭೈರವಿ—ಅಷ್ಟತಾಳ

ಎಲವೊ ನೃಪಾಧಮನೇ । ಸೂರ್ಯನ ವಂಶ । ದಲಿ ಪುಟ್ಟಿರುವ

ಧೂರ್ತನೇ ॥ ಕುಲಗುರುವಿಗೆ ದ್ರೋಹ । ಸಲೆ ರಚಿಸಿದ ಪ್ರತಿ । ಫಲವನ್ನು ಮರೆತೆಯಲ್ಲ ॥ ೧ ॥ ಭೂಸುರವರ್ಯನನು । ನಿಷ್ಕರುಣೆಯಿಂ । ಘಾಸಿ ಮಾಡಿಹ ನೀಚನು ॥ ಸಾಸದಿ ತನುತಿಂದು । ಮಾಸದ ಪಾಪಕೆ । ಹೇಸದಿದೇನ ಗೈದೆ ॥ ೨ ॥ ಎನ್ನ ಮಾತನು ಕೇಳದೆ । ಪುತ್ರನ ಹಂಬ । ಲಿನ್ನು ಸಹ ನೆರ ವೇರದೆ ॥ ಬನ್ನದೊಳಿರಿ ಕೊಂದೆ । ಚೆನ್ನೆಯಳನು ಸಂಗ । ವಿನ್ನು ಮಾಡಲು ಸಾಯೆಲಾ ॥ ೩ ॥ ಎಂದು ಶಾಪವನಿತ್ತಳು । ದೇಹವ ಬಿಡ । ಲಂದು ಸಿದ್ಧತೆ ಗೈದಳು ॥ ಬೆಂದಗ್ನಿಯಲಿ ಪತಿ । ಯೊಂದಿಗೆ ಸೇರುತ್ತ । ಹೊಂದಿದಳಮ ರತ್ವವ ॥ ೪ ॥

ಭಾಮಿನಿ

ಕೇಳು ಮುಂದಣ ಕಥೆಯನೆಲೆ ಭೂ । ಪಾಲಕನೆ ಧೂಮ್ರಾಕ್ಷ ಕಪಟದ । ಜಾಲ ಬೀಸಿದೆನೆಂದು ಗಹಗಹಿಸಿದನು ಕ್ರೋಧದಲಿ ॥ ತಾಳದನಿತಿಂ ತೃಪ್ತಿಯನು ಪಾ । ತಾಳದಲ್ಲಿಹ ಮಿತ್ರನೆನಿಸುವ । ಖೂಳವೆಗ್ಗಳ ಭಂಡ ದಾನವನನ್ನು ನೆನಸಿದನು ॥ ೧ ॥

ರಾಗ ಭೈರವಿ—ಝಂಪೆತಾಳ

ದುಷ್ಟ ಭಂಡನು ಸಿಂಹ । ವಿಷ್ಟರದಿ ಮೆರೆಯುತಿರ । ಲಷ್ಟರಲಿ ಕರೆಯರಿತು । ಥಟ್ಟನೈದಿದನು ॥ ೧ ॥ ಬರವರಿತು ಧೂಮ್ರಾಕ್ಷ । ಕರೆಸಿ ಮನ್ನಿಸಿ ಪೇಳ್ದ । ಪುರದಿ ಜನರಿಗೆ ಪದುಳ । ವಿರುವುದೇ ಮಿತ್ರ ॥ ೨ ॥ ಚಂದದಿಂದಿಹರಿಲ್ಲ । ಕಂದಿತೇಕೀ ವದನ । ಬಂದ ಬವಣೆಯ ಯೆನ್ನೊ । ಳಿಂದುಸುರು ಗೆಳೆಯ ॥ ೩ ॥ ಪೇಳಲೇನಣ್ಣನನು । ಸೀಳಿದನು ಮಿತ್ರಸಹ । ಬಾಳಲೆಂತೀ ಜಗದಿ । ಪೇಳು ದಾನವನೇ ॥ ೪ ॥ ಕೆರಳಿ ಭಂಡನು ಪೇಳ್ದ । ಬರಿದೆ ಚಿಂತೆಯು ಯಾಕೆ । ನರನು ಲಕ್ಷ್ಯವೆ ಯೆನಗೆ । ಧುರದಿ ಕೆಡಹುವೆನು ॥ ೫ ॥ ಜನಪಬಲವನು ತಿಳಿದು । ಮುನಿಯಿಂದ ಶಪಿಸಿದೆನು । ಕುಣಪಾಶಿಯಾಗಿಸಿದೆ । ವನದಿ ನೆಲಸಿಹನು ॥ ೬ ॥ ಎಸೆವ ಕಾರ್ಯವ ಗೈದೆ । ವ್ಯಸನಪಡುವುದು ವ್ಯರ್ಥ । ನುಸುಳಿತೈ ತೋಷ ನೃಪ । ವಶದೊಳಾಗಿಹನು ॥ ೭ ॥ ಪದಿನೆರಡು ವರ್ಷದೊಳು । ಮೊದಲ ರೂಪವ ಧರಿಪ । ನದಕೆ ಮೊದಲಿಂದ್ರನೊಳಾ । ಕದನ ಮಾಡಿಸುವ ॥ ೮ ॥

ಭಾಮಿನಿ

ಜವಪುರಕೆ ಸುರರಿಂದ ಕಳುಹಿಸೆ । ಹವಣಿಸುತ ದಾನವರು ಮೋದದಿ । ಜವದೊಳರಸುತ ನರ್ಮದಾತೀರದೊಳು ಕಾಣುತಲಿ ॥ ಭುವನಪತಿಯೆಡೆಗೈದಿ ವಂದಿಸ । ಲವನು ಮನ್ನಿಸುತೆಂದ ನಿಮ್ಮಯ । ಭವನವಾವುದು ಬಂದಕಾರಣ ಪೇಳಿ ಶೀಘ್ರದಲಿ ॥ ೧ ॥

ರಾಗ ನವರೋಜು—ಏಕತಾಳ

ಎನಲು ಧೂಮ್ರಾಕ್ಷಕನು । ಅತಿ । ವಿನಯುವ ತಾಳ್ದುಸಿರಿದನು ॥ ಕುಣಪ ಭೋಜರೊಳು । ಗುಣಗಣ ಶೋಭಿತ । ದನುಜವರನೆ ಕೇ । ಳಿಸಿತು ವಾತಸೀ ॥ ೧ ॥ ನವವಾದ ಪುರವೊಳಗೆ । ವಾ । ಸವ ಗೈದ ದಿತಿಜನಿಗೆ ॥ ಭುವನ ಖ್ಯಾತ ಸಹ । ಭವನು ನಾನು ಮ । ತ್ತಿವ ಕೆಳಗಿರುತಿಹ । ಭುವನದೊಳಿರು ವವ ॥ ೨ ॥ ಅಣ್ಣನ ಕೊಂದಿಹ ನರನು । ಬಲು । ಸಣ್ಣವನಾಗಿಹೆ ನಾನು ॥ ತಿಣ್ಣ ಬಲಾನ್ವಿತ । ನಣ್ಣನ ತಾಣವ । ನೆಣ್ಣಿಕೆಯನು ಬಿ । ಟ್ಟಣ್ಣ ಸೇರು ನೀ ॥ ೩ ॥ ಜವದೊಳು ನಮ್ಮೆಲ್ಲರನು । ಸಾ । ಸವ ಗೈದು ಪೊರೆ ನೀನು ॥ ನವೆ ಯುತಿರುವ ದಾ । ನವರಿಗಿಂಬು ಕೊಡು । ಭವನದಲ್ಲಿ ಕೂ । ಟವ ಪರಿ ವರ್ಧಿಸು ॥ ೪ ॥

ವಾರ್ಧಿಕ

ಕನಕಪತ್ತನಕಂದು ಕರೆತಂದು ಹಿತಕೆಂದು । ದನುಜನನು ಕುಳ್ಳಿರಿಸಿ ಪಟ್ಟಾಭಿಷೇಚನವ । ನನುಗೊಳಿಸುತಾನಂದದಿಂದ ವೈಭವದಿಂದ ವಾದ್ಯಗಳ ಘೋಷದಿಂದ ॥ ಘನವರ್ಣನೆಂದೆಂಬ ನಾಮದಿಂ ಕರೆಯುತ್ತ । ದನುಜರಿಗೆ ವಿಧವಿಧದ ಕಾರ್ಯಗಳ ಕೊಡಿಸುತಿರೆ । ಘನತೆಯನು ಪರಿಕಿಸುತ ಬಹಳ ಸಂತಸ ತಾಳಿ ಪೇಳಿದನು ಮೇಘವರ್ಣ ॥ ೧ ॥

ರಾಗ ಕೇದಾರಗೌಳ—ಝಂಪೆತಾಳ

ಅಣ್ಣರಿರ ಕೇಳಿ ನೀವು । ನಂಪದವ । ಬಣ್ಣಿಸಲಸಾಧ್ಯ ದಿಟವು ॥ ಕಣ್ಣಿಗಾ ನಂದ ನಿಮ್ಮ । ಕೃಪೆಯಿಂದ । ತಣ್ಣಗಿಹುದುದರವೆನ್ನ ॥ ೧ ॥ ಬಡವಂಗೆ ಹೇಮನಿಧಿಯು । ದೊರಕಿದಂ । ತೊಡೆತನದ ಭಾಗ್ಯಸ್ಥಿತಿಯು ॥ ನಡೆಯುತಿಹ ಕಾಡಿನೊಳಗೆ । ಲಭಿಸಿತೀ । ಮೃಡನ ಕರುಣವ ಪಡೆದಗೆ ॥ ೨ ॥ ಅದಕಿನ್ನು

ನಿಮ್ಮ ಕೊರತೆ । ಪರಿಹರಿಸಿ । ಯೊದಗಿಸುವೆ ಮೋದದೊರತೆ ॥ ಒದುಕಿನಲಿ ದಾವ ಕಷ್ಟ । ಬಂದಿಹುದು । ಸದೆಯುವೆನು ಪೇಳಿರಿಷ್ಟ ॥ ೩ ॥

ರಾಗ ಕಾಂಭೋಜ—ಅಷ್ಟತಾಳ

ಎನಲು ಪೇಳಿದ ಧೂಮ್ರನಯನ । ಕೇಳು । ವಿನಯದಿಂದುಸಿರುವ ವಚನ ॥ ನಿನಗೀಗ ದೊರಕಿ ಬಂದಿಹ ದೊರೆತನವೆಮ್ಮ । ಮನವ ತೋಷಿಸಿ ಸರ್ವ ಕೊರತೆಯ ಹರಿಸಿತು ॥ ಎನಲು ಪೇಳಿದ ॥ ೧ ॥ ಹಿತವನ್ನು ಬಯಸಿ ಪೇಳುವೆನು। ನಿನ್ನ । ಸತತದ ಸುಖಮೂಲವನ್ನು ॥ ಜೊತೆಯಲ್ಲಿ ಸಿಂಹಪಿಷ್ಟರದಿ ಕುಳ್ಳಿರಿಯೋರ್ವ । ಸತಿ ಸುಂದರಾಂಗಿಯು ಸಂತಸವೇಸೆಂಬೆ ॥ ಎನಲು ಪೇಳಿದ ॥೨॥ ದಿವಿಜಪಾಲಕ ಪತ್ನಿ ಶಚಿಯು । ಮೂರು । ಭುವನದೊಳಿಲ್ಲಾಕೆ ಗೆಣೆಯು ॥ ಭವವೈರಿ ಭಾರ್ಯೆಯು ಸೇವೆ ಮಾಡಲು ಯೋಗ್ಯ । ಳವಳಂಗ ಶೋಭೆ ಬಣ್ಣಿಸಲು ಸೋತಿಹೆನು ॥ ಎನಲು ಪೇಳಿದ ॥ ೩ ॥ ಇಂದುಮಾಕೆಯ ಮೋರೆ ನೋಡಿ । ಚಿಂತೆ । ಯಿಂದಿಹ ಕಳೆಯಿಂದ ಕೂಡಿ ॥ ಚಂದವಾಗಿಹ ಪದ್ಮಜಲದಲ್ಲಿ ಮುಳುಗಿತು । ತಂದವಳನ್ನು ನೀ ಮದುವೆ ಮಾಡಿಕೊ ಬೇಗ ॥ ಎನಲು ಪೇಳಿದ ॥ ೪ ॥ ಸರಸವಾಗಿಹ ಮಾತ ಕೇಳಿ । ಮಾರ । ಶರದಿಂದ ಘಾತಿಯ ತಾಳಿ ॥ ಸರಸಿಜಾಕ್ಷಿಗೆ ಮನವೆಳಸಿತಾದರೂ ಪರ । ತರುಣಿಯ ತರಲು ಸಂಶಯಿಸಲು ಭಂಡನು ॥ ೫ ॥

ರಾಗ ಮಧುಮಾಧವಿ—ಏಕತಾಳ

ದಿತಿಜವಂಶೋತ್ತಮ ಕೇಳು ನೀ ಸೊಲ್ಲ । ಅತಿ ಧೂರ್ತ ದೇವೇಂದ್ರನಪರಾಧವೆಲ್ಲ ॥ ದಿತಿವಂಶಜಾತ ಪೌಲೋಮನ ಕೊಂದ । ಸುತೆಯಾದ ಶಚಿಯನ್ನು ತನಗೆಂದು ತಂದ ॥ ೧ ॥ ಮೌನೀಶ ಗೌತಮಸತಿಯ ವಂಚಿಸುತ । ಮಾನಾಪಹಾರಗೈದನು ಮೋಹಪಡುತ ॥ ಮೌನಿಯು ಕೋಪಿಸೆ ಶಾಪವ ಹೊಂದಿ । ಮಾನ ನೀಗಾಡಿಕೊಂಡನು ಕೀರ್ತಿ ಕಂದಿ ॥ ೨ ॥ ಹಿರಿಯವ್ವೆ ದಿತಿದೇವೀ ಸುತರು ನಾವಿರಲು । ಕಿರಿಯವ್ವೆಯದಿತಿಪುತ್ರರು ದೇವತೆಗಳು ॥ ಥರವೇನು ಸ್ವರ್ಗವನಾಳಿಕೊಂಡಿಹುದು । ಸರಿಯೇನು ನಮ್ಮ ಸಂಪದ ಪಡೆಯುವುದು ॥ ೩ ॥ ಉದಧಿಯ ಮಥಿಸಲು ಬೇಕಾದೆವಾವು । ಸುಧೆಯುಂಬ ಸಮಯದಿ ಬೇಡವಾಗಿಹೆವು ॥ ಸದೆದು ದನುಜರನು ಮರ್ದಿಸುತ್ತಂದು । ಮುದದಿಂದ ವರವಸ್ತುಗಳನೊಯ್ದರಂದು ॥ ೪ ॥

ರಾಗ ಭೈರವಿ—ಏಕತಾಳ

ಎನಲಾ ಮಾತನು ಕೇಳಿ । ದನು । ಜನು ಬಲು ರೋಷವ ತಾಳಿ ॥ ತೊನೆ
ಯುತ ತೋಳನು ತೂಗಿ । ಇಂ । ದ್ರನ ಮೇಲೆಂದನು ರೇಗಿ ॥ ೧ ॥ ದಿತಿಜರಿ
ಗನ್ನೆಯುವನ್ನು । ಸಂ । ತತವೆಸಗುತ್ತಿಹನನ್ನು ॥ ಅತಿಜವದಿಂದಾಸನದಿ । ಶಚಿ ।
ಪತಿಯನ್ನೆಳೆವೆನು ನೆಲದಿ ॥ ೨ ॥ ಜಗ್ಗಿಸುವೆನು ಯಮನನ್ನು । ನಾ । ಕುಗ್ಗಿಪೆ
ಹುತವಹನನ್ನು ॥ ನುಗ್ಗಿ ವರುಣಬಲವನ್ನು । ಸಲೆ । ಜಗ್ಗಿಪೆ ಸಗ್ಗಿಗರನ್ನು
॥ ೩ ॥ ಸುರಪಾಲನ ಬೆಂಬಲಕೆ । ಹರಿ । ಹರವಿಧಿ ಬಂದರು ಜೋಕೆ ॥ ತರ
ಹರಿಸುವೆ ರಿಪುಗಳನು । ನೆಲ । ಕುರುಳಿಪೆ ಚಣದೊಳಗಾನು ॥ ೪ ॥ ಹೊಡೆ
ಸೈ ಭೇರಿ ನಗಾರಿ । ಬಲ । ಪಡಿಸೈ ಸೇನೆ ಸವಾರಿ ॥ ತಡೆಯದೆ ಸಗ್ಗವನೇರಿ ।
ಸುರ । ರುಡುಗಿಪ ಬಲವನು ಭಾರಿ ॥ ೫ ॥

ರಾಗ ಭೈರವಿ—ತ್ರಿವುಡೆತಾಳ

ನಡೆದರಾಗ । ನಾಕಕೆ । ನಡೆದರಾಗ ॥ ಪಲ್ಲ ॥ ನಡೆದರಾ ದಿತಿಭವರು
ವೈಭವ । ದೊಡನೆ ಗರ್ಜನೆ ಮಾಡುತ । ಜಡಧಿಗಳು ಪರಿದುಕ್ಕುವಂದದ ।
ಪಡೆಗಳಿಂದೊಡಗೂಡುತ । ಪಿಡಿದು ಕೈಯಲ್ಲಾಯುಧಂಗಳ । ಕಡುಹಿನಿಂದಲಿ
ತಿರುಹುತ । ಹೊಡೆವ ಭೇರಿ ನಗಾರಿಗಳ ಕೀ । ರಿಡುವ ವಾದ್ಯನಿನಾದ
ದೊಂದಿಗೆ ॥ ನಡೆದರಾಗ ॥ ೧ ॥ ಘೋರಸೈತರಲಾಗ ಪದಗಳ । ಭಾರಕವ
ನಿಯು ಜಗ್ಗಲು । ಧಾರಿಣಿಯ ಧರಿಸಿರುವ ಫಣಿಶಿರ । ಭಾರ ಸಹಿಸದೆ
ಕುಗ್ಗಲು । ಏರಿ ಬರೆ ನಭದಲ್ಲಿಯಾಯುಧ । ಧಾರೆ ಕಿರಣವ ಹರಡಲು ।
ವೀರಭಟರುದ್ಘೋಷದಿಂ ದಿ । ಙ್ನಾರಿಯರ ಕಿವಿ ಬಿರಿಯಲಸುರರು ॥ ನಡೆದ
ರಾಗ ॥ ೨ ॥ ದಿವಿಜಭೂಮಿಯ ಮಾರ್ಗದಲ್ಲಿಹ । ದಿವಿಜರನು ಸದೆಬಡಿವುತ ।
ಜವದಿ ಪ್ರಿಯರಿಡೆಗಾಗಿ ಪೋಗುವ । ಯುವತಿಯರ ವಶಗೈಯುತ । ದಿವದ
ಬಾಗಿಲ ಕಾಯ್ವ ಭಟರಿಗೆ । ದಿವಿಜಪತಿಯೆಲ್ಲೆನ್ನುತ । ದಿವವ ತೊರೆಯುವುದಲ್ಲ
ದೊಡೆಯಾ । ಹವಕೆ ಬರುವುದು ಪೇಳಿರೆನ್ನುತ ॥ ನಡೆದರಾಗ ॥ ೩ ॥

ವಾರ್ಧಿಕ

ಪುರುಹೂತನಿತ್ತ ಸುರನಿವಹದಿಂದೊಡಗೂಡಿ । ಸುರಸುಂದರಾಂಗಿಯರ
ಲಾಸ್ಯದಿಂದೋಲಾಡಿ । ಪರಿಜನರ ಪೊಗಳಿಕೆಯ ಗೀತದೊಳ್ ತೇಲಾಡಿ
ವೈಭವದಿ ಮೆರೆಯುತಿರಲು ॥ ಸುರವೈರಿ ಬಲದಿಂದ ಪರಿಪರಿಯ ಪೀಡೆಗಳ ।

ಪರಿಭವಿಸಿ ಪೊಂದಿರ್ದ ದ್ವಾರಪಾಲಕರಾಗ । ಥರಥರನೆ ನಡುಗುತ್ತ ದೇವ ಪಾಲಗೆ ನಮಿಸಿ ಪೇಳಿದರು ವಿನಯದಿಂದ ॥ ೧ ॥

ರಾಗ ಮುಖಾರಿ—ಏಕತಾಳ

ಸುರನಾಥ ಲಾಲಿಸೆಮ್ಮ ನುಡಿಯ । ಮಾಡುತ ಕೃಪೆಯ । ಸರಿಯಾಗಿ ಪಾಲಿಸೈ ಸುರತತಿಯ ॥ ತರತರದಾಯುಧ । ಧರಿಸುತ ಕರದೊಳು । ತಿರುಗಿಸಿ ಕಣ್ಣನು । ಜರೆಯುತ ಸುರರ ಬೆ । ದರಿಸುತ ರೋಷದಿ । ಕರುಣೆಯ ತಾಳದೆ । ತರುಣಿಯರೊಯ್ದರು । ಸರಿಯುತ ಬಂದು ॥ ಸುರನಾಥ ॥ ೧ ॥ ಬಿಡದೆ ತಡೆಯಲು ಬಾಗಿಲು ನಾವು । ಖಳದಾನವರು । ಬಡಿಯಲು ಬೆದರಿ ಬಲು ಬೆಚ್ಚಿದೆವು ॥ ನಡುಗುವ ನಮ್ಮನು । ಪಿಡಿಯುತ ಕೈಗಳ । ಝುಡಿದುರಿ ಕಟ್ಟುತ । ಸಿಡಿಯಲು ದೂರಕೆ । ತಡೆಯದೆ ನೂಕುತ । ನಡೆಯಿರಿ ಒಡೆಯಗೆ। ನುಡಿಯಿರಿ ಯೆನ್ನುತ । ಗುಡುಗಿದರವರು ॥ ಸುರನಾಥ ॥ ೨ ॥ ಘೋರನೆ ಪಡೆಯುಲು ಬಂದಿಹರಂತೆ । ಈ ನಾಕವನು । ಸೇರುತ್ತ ಪೂರ್ವಾಮರರಹರಂತೆ ॥ ವೀರ ಘನಾಭನು । ಶೂರನು ಭಂಡನು । ಧೀರ ಧೂಮ್ರಾಕ್ಷ । ಭೂರಿ ಬಲಾನ್ವಿತ । ರಾರುಭಟಿಸಿ ಭೂ । ಭಾರವ ಹೆಚ್ಚಿಸಿ । ಗಾರುಗೆಡಿಸೆ ಸುರ । ಧಾರಿಣಿಯನ್ನು॥ ಸುರನಾಥ ॥ ೩ ॥

ರಾಗ ಭೈರವಿ—ಅಷ್ಟತಾಳ

ದ್ವಾರಪಾಲಕರ ಮಾತ । ಕೇಳುತ ರೋಷ । ವೇರುತ್ತ ಪೇಳ್ದನಾತ ॥ ವೀರ ರೆಲ್ಲರು ಕೇಳಿ । ಸೇರಿ ಸ್ವರ್ಗವ ಲೋಕ । ಭಾರರು ಕೆಣಕುವರು ॥ ೧ ॥ ಜ್ವಲಿಸುವ ಬೆಂಕಿಯೊಳು । ಹಾರುತ ಬೀಳ್ವ । ಶಲಭಗಳಂತೆಮ್ಮೊಳು ॥ ಕಲಹಕ್ಕೆ ಬಂದಿಹ । ಖಲದಾನವರು ಯಮ । ನಿಲಯವ ಸೇರುವರು ॥ ೨ ॥

ರಾಗ ಕೇದಾರಗೌಳ—ಝಂಪೆತಾಳ

ಸುರಪಾಲ ವಚನ ಕೇಳಿ । ಸುರರು ದಿಟ । ಜರ ಮೇಲೆ ಖತಿಯ ತಾಳಿ ॥ ಒರೆದರೊಬ್ಬೊಬ್ಬರಾಗಿ । ಧೈರ್ಯವನು । ಪಿರಿದು ಹಿತವಂತರಾಗಿ ॥ ೧ ॥ ದಿವಿಜೇಂದ್ರ ಕೇಳು ಸೊಲ್ಲ । ಮೊದಲು ದಾ । ನವರಿಲ್ಲಿ ಬಾಳ್ದರಿಲ್ಲ ॥ ಪವನ ಹಿತ ಬಲವು ಕಿರಿದೆ । ಖಳ ಸಮೂ । ಹವನು ದಿಟ ನಾಶಿಸುವುದೆ ॥ ೨ ॥ ನಾಕದ ಸುವಸ್ತುಗಳನು । ಆಶಿಸುವ । ಆ ಕುಮತಿ ದನುಜರನ್ನು ॥ ಸಾಕೆನಿಸೆ ಕಟ್ಟಿ ಜಲದಿ । ಮುಳುಗಿಸುತ । ಯಾಕೆ ಬಿಡು ಚಿಂತೆ ಮನದಿ ॥ ೩ ॥ ಧರ್ಮ

ವನು ವೀರುಕಿಹರ । ದಿವಿಜರನು । ಪೆರ್ಮೆಯಿಂ ಪೀಡಿಸುವರ ॥ ಮಾರ್ಮ
ಲೆತು ಯುದ್ಧದಲ್ಲಿ । ಕೆಡಹುವೆ ಕು । ಕರ್ಮಿಗಳನಿರಿಸೆವಿಲ್ಲಿ ॥ ೪ ॥ ಹರಿಶರ್ವ
ಲೋಕೇಶರ । ಕೃಪೆಯಿರಲು । ಸುರವೈರಿ ದೈತೇಯರ ॥ ಹರಿಸುವೆನು ಬಲವ
ನುಗ್ಗಿ । ದೇಹದಲಿ । ಕೊರಗಿಸುವೆನವರ ಜಗ್ಗಿ ॥ ೫ ॥ ಎಂದು ನುಡಿಯಲು
ಬಲವನು । ಕೂಡಿ ಸಂ । ಕ್ರಂದನನು ಗಜವೇರ್ದನು ॥ ಸಿಂಧುವಿನ ಘೋಷ
ದಿಂದ । ಸುರರೆಲ್ಲ । ಬಂದರುತ್ಸಾಹದಿಂದ ॥ ೬ ॥

ರಾಗ ರೇಗುಪ್ತಿ—ತ್ರಿವುಡೆತಾಳ

ಬಂದರಾಗ । ಯುದ್ಧಕೆ । ಸಿಂದರಾಗ ॥ ಪಲ್ಲ ॥ ಬಂದರಾ ಖೂಳರನು ಸವೆಯುವೆ । ನೆಂದು ಕದನೋದ್ಯಾನುವೀರರು । ಸ್ಯಂದನವನೇರುತ್ತ ಗಜ ಹಯ । ವೃಂದದೊಂದಿಗೆ ಕದನಭೂಮಿಗೆ । ಮುಂದಿಮಾರ್ಬಲ ಕೂಡಿ ಕೈಮುಗಳಿಂದ ವೈರಿಗಳನ್ನು ಸೀಳುತ । ಕೊಂದು ನೆಲದಲಿ ಹೊರಳಿಸುತ ಬ । ಲ್ಪಿಂದ ಭೈರವ ಗಣಗಳಂದದಿ ॥ ಬಂದರಾಗ ॥ ೧ ॥ ಘುಡಿಘುಡಿಪ ರಣಧೀರರಾರ್ಭಟೆ । ಸಿಡಿಲಿನಂದದಿ ಮೊಳಗುತಿರೆ ಕೈ । ಖಡುಗ ತೋಮರ ಬರ್ಚಿಗಳ ಝಳ । ಹೊಡೆವ ಮಿಂಚಿನ ತೆರದಿ ಕಾಣಲು । ಒಡಲಿನಿಂ ಸುರಿವಸೃಕ್ ಮಳೆಯೆನೆ । ಮಿಡಿದು ತೇಲಾಡುವ ಗುರಾಣಿಗ । ಳಡಿಯನಿಡುವಾವೆಗಳು ವಿಟವೆನೆ । ಕಡುಹಿನಿಂ ಮಳೆಗಾಲ ತೋರುತ ॥ ಬಂದರಾಗ ॥ ೨ ॥ ಅತ್ತ ಭಂಡಾದಿಗಳು ರಥವನು । ಹತ್ತಿ ಮುಂದಕೆ ಬರುತ ಬಲ ನು । ಗ್ಗೊತ್ತಿ ಶೂಲಗಳಿಂದ ತಿವಿಯುತ । ನೆತ್ತರಿನ ಹೊಳೆಯನ್ನು ಹರಿಸುತ । ಕತ್ತಿ ಕುಂತಗಳಿಂದ ಗಜಗಳ । ಮೊತ್ತವನು ಸವರುತ್ತ ಶೌರ್ಯದಿ । ಪತ್ತಿಗಳ ಕೆಡಹುತ್ತ ಹಯಗಳ । ನೆತ್ತಿ ಒಡಿಯುತ ಸುತ್ತುಮುತ್ತಲು ॥ ಬಂದರಾಗ ॥ ೩ ॥

ರಾಗ ಶಂಕರಾಭರಣ—ರೂಪಕತಾಳ

ಸುರರ ಸೈನ್ಯವನ್ನು ನುಗ್ಗಿ । ಭರಿತ ರೋಷದಿಂದ ಕಾದಿ । ತುರಗ ಪತ್ತಿ ಗಜಗಳನ್ನು । ತರಿದು ಮುಂದಕೆ ॥ ಬರುವ ಭಂಡನನ್ನು ಕಂಡು । ಹರಿತ ಕೈದು ಕೊಂಡು ಮುಂದು । ವರಿಯುತಗ್ನಿ ತಡೆದು ಪೇಳ್ದ । ನುರಿಸಿ ಬಾಣವ ॥ ೧ ॥ ಪುರವನೆಮ್ಮ ಚೋರರಂತೆ । ಸರಿದು ಬಂದು ಹಾಳುಮಾಡಿ । ನಿರಪರಾಧಿ ಪ್ರಜೆಗಳನ್ನು । ಕರುಣವಿಲ್ಲದೆ ॥ ಮರುಳರಂತೆ ಪೀಡಿಸುತ್ತ । ಸುರರ ಸತಿಯರನ್ನು ಹಿಡಿವ । ಪರಿಯಿದೇಕೆ ದಿವಿಜವೈರಿ । ಯರುಹು ಯಾರಿಲಾ ॥ ೨ ॥

ದನುಜರಗ್ರಗಣ್ಯ ಭಂಡ । ನೆನುವ ಸುಪ್ರಸಿದ್ಧ ನಾಮ । ವೆನಗೆ ಕೆಳಗೆ ಲೋಕ ದಲ್ಲಿ । ಮನೆಯು ದಿಟವಿದು ॥ ಜನನಿ ಜ್ಯೇಷ್ಠಳಿಂಗೆ ಪುತ್ರ । ರೆನಿಪ ದೈತ್ಯರಿಂಗೆ ಸೇರ್ದ । ಮನೆಯು ಸ್ವರ್ಗ ನೀವು ಬಿಟ್ಟೀ । ಚಣದಿ ಪೋಗಿರಿ ॥ ೩ ॥ ದೈವ ಕರುಣೆಯಿಂದ ಸ್ವರ್ಗ । ನಾವು ಪಡೆದು ಶಾಸಿಸುವೆವು । ನೀವು ಮೂರ್ಖರಂತೆ ಕೇಳ್ವು । ದಾವ ನೀತಿಯು ॥ ಭಾವಿಸೆನ್ನ ಭುವನ ಸುಡುವ । ಪಾವಕನಪೆ ಯುದ್ಧ ಬೇಡ । ಧಾವಿಸುವುದು ಲೇಸು ಕಾರ್ಯ । ಸಾವೆ ನಿಶ್ಚಯ ॥ ೪ ॥ ಜಾತವೇದ ಯಾಕೆ ಯೆನಗೆ । ನೀತಿ ಪೇಳ್ವಿ ನಿನ್ನ ಮತಿಯು । ರೀತಿ ನೋಡು ಮುನಿಯ ಸತಿಯ । ನೋತು ನವೆಯುತ ॥ ಸೋತು ಪತ್ನಿಯಿಂದ ಧರ್ಮ । ಪಾತ ಹೊಂದದುಳಿದ ಧೂರ್ತ । ಮಾತು ವ್ಯರ್ಥವೆಂದು ಬಾಣ । ವ್ರಾತ ಕವಿ ಸಿದ ॥ ೫ ॥ ಕೊಚ್ಚುತೆಲ್ಲ ಕಣೆಗಳನ್ನು । ಕಿಚ್ಚುದೇವ ಪೇಳ್ದನೆಲವೊ । ಹುಚ್ಚ ರಂತೆ ಬೊಗಳುವೇಕೆ । ಮುಚ್ಚರದಿಂದ ॥ ತುಚ್ಛ ಕೇಳು ಪತಿತನಲ್ಲ । ನೆಚ್ಚು ವಂಥ ಮಾತ ಪೇಳ್ದೆ । ಮೆಚ್ಚುಕೊಡುವೆ ನೋಡೆನುತ್ತ । ಎಚ್ಚನಾಕ್ಷಣ ॥ ೬ ॥ ಬರುವ ವಿಶಿಖಗಳನು ಖಳನು । ತರಿದು ನಿನ್ನ ಸೊಕ್ಕನೀಗ । ಮುರಿವೆನೆಂದು ನಿಶಿತವಾದ । ಶರಗಳೆಸೆಯಲು ॥ ತುರಗ ಘಾತಿ ಹೊಂದಿ ಬೀಳೆ । ಧರೆಗುರುಳ್ದ ಸೂತನಾಗ । ಶರವು ನಾಟಿಯಗ್ನಿ ರಕ್ತ । ಸುರಿಯೆ ಬಿದ್ದನು ॥ ೭ ॥

ರಾಗ ಪಂತುವರಾಳಿ—ಮಟ್ಟೆತಾಳ

ಚಂಡಬಲನು ಯಮನು ಕಾಲದಂಡ ಪಿಡಿಯುತ ॥ ಭಂಡಗೆಂದ ಕೋಪ ದಿಂದ ಮುಂದುವರಿಯುತ ॥ ೧ ॥ ವೀರನನ್ನು ಗೆದ್ದೆನೆಂದು ಹಿಗ್ಗಬೇಡೆಲಾ ॥ ಸಾರಿ ಪೇಳ್ವೆ ಹರಣದಾಸೆಯಿರಲು ಪೋಗೆಲಾ ॥ ೨ ॥ ಇಲಿಯು ಜರೆದು ಪೇಳಲಾನೆ ಬೆದರಿ ಪೋಪುದೆ ॥ ಹುಲಿಯು ಕುರಿಯ ನೋಡಿ ಸೆಣಸೆ ಧರೆಗೆ ಬೀಳ್ವುದೆ ॥ ೩ ॥ ಧರ್ಮವೀರರಿ ಬಾಳ್ವರನ್ನು ಕಿರಿದು ರೂಪವೆ ॥ ನೂರ್ಮೆ ಕೊಂದ ಪರಿಯ ಯೋಚಿಸಿದರೆ ತಿಳಿಯುವೆ ॥ ೪ ॥ ಕ್ಷುದ್ರಜೀವರನ್ನು ಕೊಂದು ಪೋದಹಾಗೆಯೇ ॥ ರುದ್ರಭಂಡನನ್ನು ಕೊಲ್ಲಲಾರೆ ಹೀಗೆಯೇ ॥ ೫ ॥ ಮಿಡಿವ ಕಾಲದಂಡದಿಂದ ಝಡಿದು ಹೊಡೆಯಲು ॥ ಅಡರುತಭ್ರಪೆಟ್ಟು ತಪ್ಪಿ ಸಿಪುವನೆಸೆಯಲು ॥ ೬ ॥ ಭರದಿ ರೋಷದಿಂದ ರಥವ ಹಯವ ಕೆಡಹಿದ ॥ ಶಿರಕೆ ಬಡಿಯೆ ಭಂಡ ಕಾಲನೂರ ಸೇರಿದ ॥ ೭ ॥

ರಾಗ ಮಾರವಿ—ಅಷ್ಟತಾಳ

ಇತ್ತ ಧೂಮ್ರನೇತ್ರ ಸುರರ । ಮೊತ್ತವನ್ನು ಸವರಿ ಮುಂದ । ಕೊತ್ತಿ ಬರಲು ಕಂಡು ವರುಣ । ಮುತ್ತಿದಸುರನ ॥ ೧ ॥ ಬಣಗು ದೈತ್ಯ ಯಾಕೆ ನಿನಗೆ । ರಣವು ವರುಣದೇವನಲ್ಲಿ । ಸೆಣಸೆ ನೀಣು ಕಾಲನೆಡೆಗೆ । ಜಣದೊಳೊಯ್ವುದು ॥ ೨ ॥ ದೈತ್ಯರನ್ನು ವಂಚಿಸಿ ದು- । ಷ್ಕೃತ್ಯದಿಂದ ಸುಧೆಯ ನುಂಡು । ಮೃತ್ಯುವಿಲ್ಲವೆನುವ ಹಮ್ಮ- । ಮರ್ತ್ಯ ಬೇಡೆಲಾ ॥ ೩ ॥ ಸುರೆಯ ಕುಡಿವ ಬುದ್ಧಿಗೆಟ್ಟು । ಪರರ ನಾರಿಯರನು ಬಗೆವ । ಚರಿತ್ರಹೀನರಿಂಗೆ ಸುಧೆಯು ದೊರಕಲಾರದು ॥ ೪ ॥ ಪರರಕುಲದ ಸತಿಯ ತಂದು । ಸುರಪ ಪತ್ನಿ ಮಾಡಿಕೊಂಡ । ಗುರುವ ಮಡದಿ ಕೂಡಿದಧಮ । ನರುಹು ಯಾರೆಲಾ ॥ ೫ ॥ ದುಷ್ಟಕೃತ್ಯ ಪಾಪಲೇಪ । ಶ್ರೇಷ್ಠರನ್ನು ಪೊಂದಲಾರ । ದಷ್ಟು ಪುಣ್ಯ ರಾಶಿಯಲ್ಲಿ । ಇಷ್ಟು ಕಾಣದು ॥ ೬ ॥ ಬೇಡಬೇಡ ಶ್ರೇಷ್ಠತನದ । ಗಾಢಗರ್ವವೆನ್ನೊಳೀಗ । ನೋಡು ಸಿಗಿವೆನುರವನೆಂದು । ಹೂಡಿದಸ್ತ್ರವ ॥ ೭ ॥ ತರಿಯುತವನು ಕ್ಷುದ್ರನೆಂದು । ಪರಿಕಿಸೆನ್ನ ಶೌರ್ಯವೆನುತ । ಭರದಿ ರಥವ ತುರಗ ಸಹಿತ । ಕೊರೆದು ಕೆಡಹಿದ ॥ ೮ ॥ ಬೇರೆ ರಥವನೇರಿ ದೈತ್ಯ । ನಾರು ಭಟಿಸಿ ಕ್ರೋಧದಿಂದ । ಮೂರು ಶರಗಳಿಂದಲವನ । ಗಾರುಗೆಡಿಸಿದ ॥ ೯ ॥

ರಾಗ ಸೌರಾಷ್ಟ್ರ—ತ್ರಿವುಡೆತಾಳ

ಜವದೊಳಾ ವರುಣಾದಿಗಳ ದಾ । ನವನು ಕೆಡಹುತ ಬರಲು ಕಾಣುತ । ಲವನ ಕಡುಹನು ನಿಲಿಪೆನೆನ್ನುತ । ಪವನ ತಡೆದ ॥ ೧ ॥ ಪ್ರಳಯ ಕಾಲದಿ ಸೃಷ್ಟಿಯನು ಸಲೆ । ಯುಲುಗಿಸುವ ವೀರಪ್ರಭಂಜನ । ಮಲೆತುನಿಲೆ ನಿನ್ನಳವು ಸುಮ್ಮನೆ । ತೊಲಗೊ ಬೇಗ ॥ ೨ ॥ ವಾತ ಫಣಿಗಾಹಾರವೆಂಬುದು । ಖ್ಯಾತವಾಗಿದೆ ಧೂಮ್ರನೇತ್ರನು । ವಾತಭಕ್ಷಕನೆಂದು ತಿಳಿದುಕೊ । ನೋತುಪೋಪೆ ॥ ೩ ॥ ಮೊದಲು ಬಂದಿಹದೈತ್ಯರಮರರ । ಸದನದಲ್ಲಿಹ ಭೋಗ ಭಕ್ಷಿಸೆ । ಮುದದಿ ಸೇರ್ದರು ತರಣಿಜಾತನ । ಸದನವನ್ನು ॥ ೪ ॥ ಈಗ ಬಂದವ ಬೇರೆ ಸುರಪನ । ಬಾಗಿಸುತ ವೊದಲೊಯ್ವ ಶಚಿಯನು । ಮೇಘವರ್ಣನ ಸನ್ನಿಧಾನಕೆ । ಸಾಗಿಸುವೆನು ॥ ೫ ॥ ಪ್ರೇಮದಳಿ ಸಂಪಿಗೆಯ ಬಯಸಲು । ವಾಮನನು ವಿಧುಕಲೆಗೆ ನೆಗೆಯಲು । ರಾಮಣೀಯಕ ಮಿಂಚ ತುಡುಕಲು । ಕ್ಷೇಮವಿಲ್ಲ ॥ ೬ ॥ ಬಿಡುಬಿಡೆಲವೋ ಬಾಯಪೌರುಷ । ಮೃಡನು ಬಂದರು ಬರಲಿ

ಛಲವನು । ಬಿಡೆನು ನೋಡಳವೆಂದು ಬೀಸಿದ । ಬಡುಗವನ್ನು ॥ ೭ ॥ ವಾರಿ ಸುತ ಗದೆಯಿಂದ ಹತಿಯನು । ನಾರಿಗೆಂದೈತಂದ ದುಷ್ಟಗೆ । ತೋರಿ ಕೊಡು ವೆನು ಮೃತ್ಯುವೆನ್ನುತ । ವೀರ ಬಡಿದ ॥ ೮ ॥ ಇವನ ಧುರದಲಿ ಸೋಲಿಪ್ಪುದು ಬಿಡು । ನವೆದು ಮರಣವ ಪೊಂದುವುದೆ ದಿಟ । ಬವಣೆ ಯಾತಕೆ ಯೆನ್ನು ತೋಡಿದ । ನವನು ಬೇಗ ॥ ೯ ॥

ವಾರ್ಧಿಕ

ಮೇಘವರ್ಣನು ಧುರದಿ ಬಲದಿಂದ ಛಲದಿಂದ । ಕೂಗುತಾರ್ಭಟಿಸುತ್ತ ಕಾಡುತಂ ಮೋದುತಂ । ನಾಗತುರಗಾದಿಗಳ ಮೆಟ್ಟುತಂ ಕುಟ್ಟುತಂ ಥಟ್ಟಸುರೆ ಸಿಟ್ಟಿನಿಂದ ॥ ಸಾಗಿ ಬರೆ ಕೆಲರಾಗ ಜುಣುಗಿದರ್ ಗೊಣಗಿದರ್ । ಬಾಗಿ ಸೈನಿಕರಾಗ ಕಾಡುತಿರೆಯೋಡುತಿರೆ । ನಾಗರಥವೇರಿ ವಜ್ರವ ಕೊಂಡು ಮುದ ಗೊಂಡು ಮಾರಾಂತನಿಂದ್ರನಂದು ॥ ೧ ॥

ರಾಗ ಕಾಂಬೋದಿ—ಝಂಪೆತಾಳ

ಯಾರು ನೀನೆಲೆ ದೈತ್ಯ ನಾಕವನ್ನೇರಿ ಬಲು । ಕ್ರೂರತನದಿಂದ ಪರಿಜನರ ॥ ನಾರಿಯರ ಪರಿಭವಿಸಿಯಪಹರಿಸಿ ಯೆಮ್ಮ ಪುರ । ಸೂರೆಗೊಳ್ಳುವೆಯೇಕೆ ಒದರು ॥ ೧ ॥ ಅರಿಯು ಘನವರ್ಣನೆಂದೆಂಬ ನಾಮವನಾಂತೆ । ಪುರವೆನ್ನ ಕನಕಪತ್ತನವು ॥ ಹಿರಿಯವ್ವೆ ದಿತಿಪುತ್ರರನು ವಂಚಿಸುತ ಸ್ವರ್ಗ । ಕಿರಿಯವಳ ಸುತರಾಳ್ವುದೇನು ॥ ೨ ॥ ವಿರಚಿಸುತ ಶತಯಾಗ ಪುಣ್ಯಪರಿಪಾಕದಿಂ । ದರ ಸುತನವೆನಗೆ ನಾಕದಲಿ ॥ ಸುರರಿಲ್ಲ ಸತ್ಕರ್ಮದಿಂದ ಬಂದಿಹರಿಲ್ಲಿ । ಗಿರವಿಲ್ಲ ಪಾಪಾತ್ಮರಿಂಗೆ ॥ ೩ ॥ ಸತ್ಯಶುದ್ಧಾಚಾರದಿಂದಿರುವೆನೆಂದು ದು । ಷ್ಕೃತ್ಯವನು ಮಾಡುತಿಹೆ ನೀನು ॥ ಸ್ತುತ್ಯ ಮುನಿ ಗೌತಮನ ಸತಿಯಹಲ್ಯೆಯ ಪಾತಿ । ವ್ರತ್ಯವನು ಭಂಗಿಸಿದೆಯಧಮ ॥ ೪ ॥ ಮುನಿವಧುವ ಹೃದಯೇಚ್ಛೆಯನು ತೀರಿಸಿದೆ ಬದಲು । ತನುಭೋಗದಾಸೆಯಿರಲಿಲ್ಲ ॥ ಮುನಿದ ಮುನಿ ರೋಷ ದುರಿಯಲಿ ಬೆಂದು ತನುವ ಪಾ । ವನವಾಗಿಸಿಹೆ ದೋಷವಿಲ್ಲ ॥ ೫ ॥ ಖೂಳ ಸುರಪಾಲ ಯಾವಾಗಲೂ ದಾನವರ । ಮೇಲೆ ಕಿಡಿಗಾರುತಿಹೆ ನೀನು ॥ ಪೌಲೋಮತನುಜೆಯನ್ನಪಹರಿಸಿ ಪಿತನ ಯಮ । ನಾಲಯಕೆ ಕಳುಹಿಸಿವೆ ಯಲ್ಲ ॥ ೬ ॥ ದಾನವ ಪುಲೋಮನನು ಧರ್ಮವೀರಿದ ಕತದಿ । ಭಾನುಜನ ಮನೆಗೆ ಸೇರಿಸಿದೆ ॥ ಮಾನಿನೀಮಣಿಯು ನಲವಿಂದ ವರಿಸಿವಳೆಂದು । ಪಾಣಿ

ಪೀಡನಗೈದೆ ಹಿತದಿ ॥ ೭ ॥ ದಿತಿಸುತರ ಮೇಲೆ ನಿನಗೆಷ್ಟು ದ್ವೇಷವು ಶಿವನೆ। ಮತಿಯ ತೋರೆಯುತ್ತೇನ ಗೈದೆ ॥ ದಿತಿದೇವಿಗರ್ಭವನು ಮೋಸದಿಂ ತರಿತರಿದು। ಪತಿತನಾದೆ ಸುರೇಶ ದಿಟದಿ ॥ ೮ ॥ ಲೋಕಪೀಡಕರೆಂಬುದಿದು ದಿಟವು ದೈತ್ಯ ರನು। ನೀಕರಿಸುತಿರುವೆನದರಿಂದ ॥ ಶೋಕೆಯಿಂದಲಿ ತರಿದೆ ಪಾಪಪಿಂಡಗ ಳೆಂದು। ಲೋಕೇಶವಶದಿ ಬದುಕಿದವು ॥ ೯ ॥

ರಾಗ ಮಾರವಿ—ಏಕತಾಳ

ಸುರಪತಿ ದೈತ್ಯರಿಗನ್ನೆಯವೆಸಗುವ। ಪುರುಷಾಧಮ ನಿನ್ನ ॥ ಮುರಿಯುವೆ ಗರ್ವವನೆನ್ನುತ ಕೋಪದಿ । ಶರಗಳನೆಸೆದಾಗ ॥ ೧ ॥ ಕಡಿದಾ ಕಣೆಗಳ ನಿಮಿಷದೊಳನಿಮಿಷ । ರೊಡೆಯ ಪರಾಕ್ರಮದಿ ॥ ಕಿಡಿಗಾರುತ ಹೊಗೆ ಮುಸುಕುವ ವಹ್ನಿಯು। ಮಿಡಿದನು ಮಾರ್ಗಣವ ॥ ೨ ॥ ಸುರಿಸುವ ಧಾರಾ ಕಾರದಿ ಜಲವನು। ವರುಣಾಸ್ತ್ರದೊಳದನು ॥ ಪರಿಹರಿಸುತ ಹೊರಸೂಸುವ ಗರಲವ। ನುರಗಾಸ್ತ್ರದೊಳೆಚ್ಚ ॥ ೩ ॥ ನೆಗೆಯದಿರೆಲವೋ ಮೇಘಾಭನೆ ನೀ। ತೆಗೆವೆನು ಭುಜಗವನು ॥ ಜಿಗುಹನು ನೋಡೀಗೆನ್ನುತ ಗರುಡದಿ। ಬಗೆಹರಿ ಸಿದನದರ ॥ ೪ ॥ ಕಣೆಯನು ಪ್ರತಿಮಾರ್ಗಣದಿಂ ಛೇದಿಸಿ । ಘನವರ್ಣನ ಧನುವ ॥ ಕಿನಿಸಿನೊಳಿಕ್ಕಡಿಗೈಯ್ಯುತ ಕಣೆಯಿಸೆ। ಚಣದೊಳು ಮೂರ್ಛಿಸಿದ ॥ ೫ ॥

ರಾಗ ಭೈರವಿ—ಏಕತಾಳ

ಕಣದೊಳು ಮೂರ್ಛೆಯು ತಿಳಿದು। ಅರೆ। ಚಣದಿಂದೆದ್ದನು ಮುಳಿದು ॥ ಮಣಿಸುವೆ ನಿನ್ನನು ಯೆನುತ । ಹೊಡೆ । ದನು ಖಡ್ಗವ ತಿರುಗಿಸುತ ॥ ೧ ॥ ಸುರಪನು ಖಡ್ಗವ ಬೇಗ। ತುಂಡರಿಸಿದ ರೋಷದೊಳಾಗ ॥ ಹರಿತದ ಶೂಲವ ನೆಸೆಯೆ। ಅದ। ಮುರಿದನು ಶೌರ್ಯದೊಳೆಸೆಯೆ ॥ ೨ ॥ ಗದೆಯಂ ತಿರು ಹುತ ಬಂದಾ। ಆ। ಮದಯುತನತಿ ಖತಿಯಿಂದ ॥ ಮದವನ್ನಿಳಿಸುವೆನೆಂದ। ಆ। ಯುಧವನು ಹಿಡಿದೆಳೆದಿಂದ್ರ ॥ ೩ ॥

ಭಾಮಿನಿ

ಗದೆಯು ಪೋಗಲು ಮೇಘವರ್ಣನು । ಕುದಿದು ಕೋಪದೊಳಾತು ಗಚ್ಚುತ। ಸದೆದು ಕೆಡಹುವೆ ಮಲ್ಲಯುದ್ಧದೊಳೆಂದು ಗರ್ಜಿಸಲು ॥ ಕದನ

ದೊಳು ಮುನಿಶಪ್ತರಾಜನು । ವಧಿತನಹನೆನುತಾಗಮಿಸಿ ನಾ । ರದನು ರಣ ಶೂರರನು ಸಂತವಿಸುತ್ತ ಪೇಳಿಹನು ॥ ೧ ॥

ರಾಗ ಸುರುಟಿ—ಏಕತಾಳ

ತಿಳಿದುಕೊ ಸುರಪಾಲ । ಸಾಂತ್ವನ । ತಳೆದುಕೊ ಗುಣಜಾಲ ॥ ಕೊಳು ಗುಳದೊಳು ಕೈ । ಚಳಕವ ತೋರಿಸಿ । ಕೊಲಬೇಡೀತನ । ಖಳನಿವನಲ್ಲ ॥ ತಿಳಿದುಕೊ ॥೧॥ ಇನವಂಶಜನಹನು । ಭುವನದಿ । ಮನುಜಕುಲೋತ್ತಮನು॥ ಜನಪರಿಪಾಲಕ । ವಿನಯ ವಿರಾಜಕ । ಮುನಿವರ ಶಪಿಸಲು । ದನುಜನಾಗಿ ರುವ ॥ ತಿಳಿದುಕೊ ॥ ೨ ॥ ಹನ್ನೆರಡಬ್ದಗಳು । ಶಾಪದ । ಬನ್ನಕವಧಿ ಕೇಳು ॥ ಮುನ್ನಿನ ರೂಪವ । ನಿನ್ನತಿ ಶೀಘ್ರದೊ । ಳುನ್ನತ ಗುಣಸಂ । ಪನ್ನನು ಪೊಂದುವ ॥ ತಿಳಿದುಕೊ ॥ ೩ ॥

ಕಂದ

ಇಂತಾ ಮುನಿಕುಲಶೇಖರ । ದಂತಿವರೂಥನ ನಿಲಿಸುತ ಕೊಳುಗುಳ ದಿಂದಂ ॥ ದಂತವ ಕಡಿಯುವ ದಾನವ । ಕಾಂತನ ಕೋಪವ ತಣಿಸಲು ನಗು ನಗುತೆಂದಂ ॥ ೧ ॥

ರಾಗ ಕೊರವಿ—ಆದಿತಾಳ

ತೋರಿದೆ ಸಮರದಿ । ಭೂರಿ ಪರಾಕ್ರಮ । ಗಾರುಗೆಡಿಸಿ ಸುರಧೀರರ ॥ ವೀರ ವೈರಿ ಕರಿ । ವಾರಕೆ ಕೇಸರಿ । ಯಾರು ನಿನಗೆ ಸಮನಾಶರ ॥ ತೋರಿದೆ ॥ ಪಲ್ಲ ॥ ಬಿಡುಬಿಡು ಕದನವ । ನಡಸಿದ ಕೋಪವ । ನಡಗಿಸುತಾದರ ತೋರಿಸು ॥ ಸಡಗರವಿಲ್ಲದ । ಮೃಡಭಕ್ತನ ಸುರ । ರೊಡೆಯನ ಹಿತದೊಳು ಪಾಲಿಸು ॥ ತೋರಿದೆ ॥ ೧ ॥ ಹೇಳಿಕೆ ನಿನ್ನಯ । ಕೇಳುತ ಸುರರನು । ಪಾಲಿ ಸುತಿರಲೀ ನಾಕದಿ ॥ ಧಾಳಿಯನೆಸಗದೆ । ಯಾಲಯದೊಳು ನೀ । ಲೀಲೆ ಯಿಂದಲಿರು ಸೌಖ್ಯದಿ ॥ ತೋರಿದೆ ॥ ೨ ॥

ವಾರ್ಧಿಕ

ಪರಿಹರಿಸಿ ಕಲಹವನು ನಾರದನು ನಡೆಯುತಿರೆ । ಸುರಪನಂ ಮನ್ನಿಸುತ ಮೃದುಮಧುರ ಭಾಷಣದಿ । ತೆರಳುತಿರೆ ದಾನವನು ಕೆಲಗಾಲ ಕಳೆಯುತಿರ ಲನ್ನೆಗಂ ಶಾಪಶನಿಯು ॥ ತೊರೆಯುತಿರೆ ನೃಪನನ್ನು ಸಾಕೇತ ಸೇರುತಿರೆ । ಪುರಜನರು ಸಂತಸದ ಕಡಲಲ್ಲಿ ತೇಲುತಿರೆ । ನರಪತಿಯು ಗುರುವಿಂಗೆ ನಮಿಸಿ ಸಚಿವಾದಿಗಳ ಮನ್ನಣೆಯ ಕೈಗೊಂಡನು ॥ ೧ ॥

ರಾಗ ಸಾವೇರಿ—ಅಷ್ಟತಾಳ

ಧರಣಿಪ ಮೋದದಿಂದ । ಮದಯಂತಿಯು । ತುರಿಪದಿ ಕಾಣಬಂದ ॥ ವಿರಹದ ಬೇಗೆಯಿಂದುರಿವ ಚಕೋರಿಯು । ಸರಸಹಾಸದ ಬೆಳದಿಂಗಳಿಂ ತಣಿಸಲು ॥ ೧ ॥ ಬರವನ್ನು ತಿಳಿದಳಾಗ । ಮದಿರಾಕ್ಷಿಯು । ಎರೆಯನ ಕಂಡು ಬೇಗ ॥ ಚರಣಕ್ಕೆ ಪೊಡಮಟ್ಟಳಾನಂದ ಬೇದದಿ । ಧರಿಸಿರ್ಪ ಬಿಸಿಲುಗತ್ತಲೆ ಸಂಜೆಯುಂದದಿ ॥ ೨ ॥ ತೆಗೆದು ತಕ್ಕೈಸಿದನು । ವಲ್ಲಭನಾಗ । ಬಗೆಯರಿಯಲು ಪೇಳ್ದನು॥ ಮೊಗಚಂದಿರದಿ ಕಪ್ಪು ಹೊಸತಾಗಿ ಕಾಂಬುದು । ನಗೆಯು ಹಿಂದಕೆ ಯೇಕೆ ಹೊಗೆಯಾಡುತಿದೆ ಖೇದ ॥ ೩ ॥ ಪೇಳೆನ್ನ ಕಣ್ಮಣಿಯೇ । ಮೌನವು ಯೇಕೆ । ಬಾಳಿನ ಪೆಣ್ಮಣಿಯೇ ॥ ಕಾಳಾಹಿವೇಣಿ ಯಾರಿಂದೊದಗಿತು ಶೋಕ । ವಾಳಿಯರಿಂದಲೊ ಪರಿಜನರಿಂದಲೊ ॥ ೪ ॥ ಇನಿಯ ಲಾಲಿಸು ವಚನ । ನಮ್ಮಯ ಗುರು । ಮುನಿಯು ಪೇಳಿದ ಹದನ ॥ ವನದಲ್ಲಿ ನೆಲಸುತಲಿರ ಲೋರ್ವ ಮುನಿಯನ್ನು । ಹನನಗೈಯ್ಯುತ ತಿಂದೆಯಂತೆ ನೀ ಹಸಿವಿಂದ ॥ ೧ ॥ ಮುನಿಪತ್ನಿ ಶೋಕದೊಳು । ನಿನ್ನೊಳು ಬೇಗ । ಮುನಿದು ಶಾಪವ ನಿತ್ತಳು ॥ ಇನಿಯಳ ಸಂಗ ನೀ ಮಾಡಲು ಮೃತಿಪೊಂದು । ಜನಪ ತನ್ನಯ ಪಾಪ ಫಲವ ಭೋಗಿಸುಯೆಂದು ॥ ೬ ॥ ಎಂತು ನಾ ತಾಳುವೆನು । ಈ ಶೋಕದ । ಚಿಂತೆಯ ಕಷ್ಟವನ್ನು ॥ ಕಾಂತಮನೋಹರ ಜಾಳ್ ಬರಿದಾಯಿತು । ಸಂತಾನದಿಚ್ಛೆಯು ಮರುಮರೀಚಿಕೆಯಾಯ್ತು ॥ ೭ ॥

ಕಂದ

ಎರೆಯಳು ಪೇಳಿದ ಮಾತಾ । ನರಪನ ಕಿವಿಗಳನಿರಿಯಿತು ಬಗೆ ಕದಡಿದುದಾಗಳ್ ॥ ತರಹರಿಸುತ ಬಿಸುಸುಯ್ಯುತ । ಸುರಿಸಿದ ಕಂಬನಿಯನು ಹತ ವಿಧಿಯಂ ನೆನೆದುಂ ॥ ೧ ॥

ರಾಗ ನೀಲಾಂಬರಿ—ಆದಿತಾಳ

ಹರನೆ ಈ ವಂಶದೊಳು । ಎನ್ನಂಥ ಪಾಪಿ । ಇರುವರೆ ಲೋಕದೊಳು । ಕರೆಗೊಂಡುದಿನವಂಶವು । ಸಂತತಿ ಭೇದ । ದೊರಕಿತು ನೂತನವು ॥ ೧ ॥ ಎನ್ನಿಂದ ನಂತರದಿ । ಪಿಂಡದ ಲಾಭ । ವಿನ್ನು ಹೊಂದದ ಖೇದದಿ ॥ ಬನ್ನ ಪಡುವದಾಯಿತು । ಪಿತೃಗಳು ಯೆನ್ನೊ । ಳುನ್ನತ ಋಣ ಸೇರಿತು ॥ ೨ ॥ ವ್ರತದಾನಯಾಗವನು । ಮಾಡಿದೆ ಧರ್ಮ । ಕ್ಷಿತಿಯಲ್ಲಿ ಸಲಹಿದೆನು ॥ ಹತ

ದೈವ ಮಾಡಿಸಿತೆ। ಪಾಪದ ಕರ್ಮ। ಸುತನ ಹೊಂದಿಸದಾಯಿತೆ ॥ ೩ ॥

ರಾಗ ಸಾಂಗತ್ಯ—ರೂಪಕತಾಳ

ಇಂತು ನಾನಾ ಪರಿಯಿಂದ ದುಃಖಿಸೆ ಮದ । ಯಂತಿಯೊಂದಿಗೆ ಮಿತ್ರ ಸಹನು ॥ ಸ್ವಾಂತದೊಳರಿತಾಗ ಬಂದು ಪೇಳಿದ ಗುರು। ಚಿಂತಿಸದಿರು ಪ್ರಾಜ್ಞ ನೃಪತಿ ॥ ೧ ॥ ಜಗವಿದು ರಂಗಮಂಚವು ಬೊಂಬೆಗಳು ನಾವು। ಖಗವಾಹ ನನು ಸೂತ್ರಧಾರಿ ॥ ಬಗೆಗೆ ಬಂದಂತೆ ನಮ್ಮನು ಕುಣಿಸುವ ನೋಡು। ನಗು ತಲೆ ಸಿಹಿಕಹಿಯುಣ್ಣು ॥ ೨ ॥ ಆದರೆ ಧರ್ಮವಿಹೀನವಾಗಿಹ ಕರ್ಮ । ಸಾಧನ ಸಾಫಲ್ಯಕೆಂದು ॥ ವೇದಸಮ್ಮತ ಪುತ್ರಕಾಮೇಷ್ಟಿಯನು ನೀನು। ಸಾಧಿಸೈ ಸಂತಾನಕಾಗಿ ॥ ೩ ॥ ಬಹುವಿಧವಾಗಿಹ ನಿನ್ನ ಕಷ್ಟಕೆ ಮೂಲ। ನಹನು ಧೂಮ್ರಾಕ್ಷ ರಾಕ್ಷಸನು ॥ ಅಹಿತನಾಗಿಹ ದುಷ್ಟನವನನ್ನು ಕೊಲ್ಲ ನೀ। ಮಿಹಿರವಂಶದ ಕೀರ್ತಿ ಬೆಳಗು ॥ ೪ ॥

ರಾಗ ಭೈರವಿ—ಅಷ್ಟತಾಳ

ಮುನಿಯುಕ್ತ ಭೂಪನಾಗ। ಧೂಮ್ರಾಕ್ಷಾದಿ। ದನುಜರ ವಧಿಸೆ ಬೇಗ ॥ ಮುನಿಯ ನೇಮದಿ ಸೇನೆ। ಯನು ಕೂಡಿಕೊಳ್ಳುತ। ಕನಕಪತ್ತನ ಮುತ್ತಿದ ॥ ೧ ॥ ಖಳ ಧೂಮ್ರನೇತ್ರ ಬಂದ। ಸೇನೆಯಗೂಡಿ । ಕೊಳುಗುಳಕೆಂದು ನಿಂದ ॥ ಅಳಿಸುವೆ ಕೋಟೆ ಕೊ । ತ್ತಳವೇಕೆ ದನುಜರ। ಸುಳಿಸುವೆ ನಿನ್ನ ಕೊಂದು ॥ ೨ ॥ ಸಿಕ್ಕಿದೆಯಧಮ ನೀನು । ಕಷ್ಟದೊಳೆನ್ನ । ಸಿಕ್ಕಿಸಿರುವ ಧೂರ್ತನು ॥ ಸೊಕ್ಕಮುರಿದು ಗಳ । ವಿಕ್ಕಡಿಗೈಯುತ್ತ। ಮುಕ್ಕಿಸುವೆನು ಭೂತಕೆ ॥ ೩ ॥ ಕ್ಷಿತಿನಾಥ ಭ್ರಾತನನ್ನು। ಕೊಂದುದಕೀಗ। ಹತಿಸದೆ ಬಿಡೆ ನಿನ್ನನು ॥ ಮಥಿಸುವೆ ಸೈನಿಕ। ವ್ರತತಿಯನೆನ್ನುತ್ತ-। ಮಿತಬಾಣಗಳ ನೆಚ್ಚನು ॥ ೪ ॥ ಮರೆಯೆ ಮಾಡಿದ ದ್ರೋಹವ । ಎನ್ನಯ ಕಾಲಿ। ಗೆರಗಿ ಬಿದ್ದರು ಕಂಠವ ॥ ತರಿಯದೆ ಬಿಡೆ ನಿನ್ನ । ಸುರಿಸಿ ಮಾರ್ಗಣವೆಂದು। ಮುರಿದನು ಧನುವನಾಗ ॥ ೫ ॥ ತುಂಡುಗೈದೆಯ ಧನುವ । ಖಂಡೆಯದಿಂದ। ಚಂಡ ಪರಾಕ್ರಮುವ ॥ ಭಂಡ ತೋರಿಪೆನೆಂದು। ದ್ದಂಡತನದಿ ಬರೆ। ಚೆಂಡಾಡಿದನು ಶಿರವ ॥ ೬ ॥

ವಾರ್ಧಿಕ

ನರಪತಿಯು ನೂರಾಂತ ಖಳರನ್ನು ಕೊಂದು ಪದ। ಕೆರಗಿ ನಿಂದಿಹ ಸಾಧು

ದನುಜರನು ದಯೆಯಿಂದ । ಪೊರೆದು ಭೀತರಿಗಭಯವನು ತೋರಿ ತನ್ನ ಪುರ ಕಂದು ಬಿಜಯಂಗೈದನು ॥ ಅರಿವೀರಕರಿಹರಿಯು ಜಯದುಂದುಭಿಯ ಮೊಳಗಿ । ಪುರಕೆ ಬರುತಿಹನೆಂದು ಮನೆಮನೆಯ ಶೃಂಗರಿಸಿ । ಪುರಜನ ಶುಭಾಗಮನ ಕೋರುತಿರಲನ್ನೆಗಂ ಪೊಕ್ಕನವ ಮಂದಿರವನು ॥ ೧ ॥ ವರ ಪುತ್ರಕಾಮೇಷ್ಟಿಯನ್ನು ವಿರಚಿಸೆ ಮಂತ್ರ । ಪರಿಪೂತವಾದ ಚರುವನ್ನು ಭಕ್ಷಿಸೆ ರಮಣಿ । ಭರಿತ ಗರ್ಭವ ಪಡೆದು ಸಪ್ತಾಬ್ದ ಕಳೆದರೂ ಜನಿಸದಿರ ಲಶ್ಮದಿಂದ ॥ ಗುರುಗರ್ಭವಂ ಸತಿಯು ಕುಟ್ಟುತಿರೆ ಹೊಂದಿದಳು । ನರಪತಿಯ ವಂಶಲತೆ ದಾಂಗುಡಿಯನಿಟ್ಟಿತೆನೆ । ವರಬಾಲರತ್ನನನ್ನವಗಶ್ಮಕಾಖ್ಯೆಯನ್ನಿರಿ ಸಿದರು ಮೋದದಿಂದ ॥ ೨ ॥ ಬೆಳೆಯುತಿರುವಾ ತನ್ನ ಪುಣ್ಯಫಲದಂತಿರುವ । ಚೆಲುಮಗನ ಮೊಗದಿಂದ ಹೊಮ್ಮುತಿರುವೆಳನಗೆಯು । ಬೆಳದಿಂಗಳಾ ನೃಪನ ಮಾನಸಾಕಾಶವನು ಸೊಂಪಾಗಿ ಬೆಳಗುತಿರಲು ॥ ಜಲಧಿಮೇಖಲೆಯಾದ ಧಾತ್ರಿಯಂ ನಿಜಬಾಹು । ಬಲದಿಂದ ಲೋಕಾನುರಾಗವಂ ಪಡೆಯುತ್ತ । ಲಲಿತವಹ ಕೀರ್ತಿಲತೆ ಗಗನಾಂತಪರ್ಯಂತ ಹಬ್ಬುತಿರೆ ಪಾಲಿಸಿದನು ॥ ೩ ॥

ರಾಗ ಸೌರಾಷ್ಟ್ರ—ತ್ರಿವುಡೆತಾಳ

ಎನುತ ಶುಕಮುನಿ ನೃಪತಿಗುಸಿರಿದ । ದಿನಪಕುಲಜನ ಚರಿತೆ ಸೂತನು । ಮುನಿಗಳಿಗೆ ಮುದದಿಂದ ಪೇಳಿರು । ವಿನಿತು ಕಥೆಯ ॥ ೧ ॥ ಹೇಮಲಂಬ್ಯಾ ಷಾಢಮಾಸದ- । ಸೀಮ ಪಾಡ್ಯದ ಶುಕ್ರವಾರದಿ । ನೇಮದಿಂ ಶ್ರೀವೆಂಕಟೇಶನ । ನಾಮ ನೆನೆದು ॥ ೨ ॥ ಭೂಸುರೇಶ್ವರ ಪುತ್ರನಾಗಿಹ । ಭಾಸಿಸುವ ಪದ್ಯಾಣ ಗೇಹದಿ । ತೋಷಿ ಜನಿಸಿದ ವೆಂಕಟೇಶ್ವರ । ಸಾಸದಿಂದ ॥ ೩ ॥ ಬರೆದು ಮುಗಿಸಿದೆ ಯಕ್ಷಗಾನದಿ । ಸರಸತಿಯು ಬಗೆದೋರ್ದ ತೆರದಿಂ । ಕರುಣೆ ಯಿಂದಿದನೀಕ್ಷಿಸುತ ಬುಧ । ವರರೆ ಪರಸಿ ॥ ೪ ॥ ಪರಮಪಾವನ ಪುಣ್ಯ ಕಥೆಯಿದ । ನರಿಯುತೋದಲು ವಿಷ್ಣುಮೂರ್ತಿಯು । ಪೊರೆಯುವನು ದೇಲಂತಬೆಟ್ಟೇಶ್ವರನು ದಯದಿ ॥ ೫ ॥

ರಾಗ ಸೌರಾಷ್ಟ್ರ—ಏಕತಾಳ

ಮಂಗಲಂ ಜಯ ಮಂಗಲಂ ॥ ಪಲ್ಲ ॥ ಮುನಿನುತಚರಿತ ಗಿರೀಶನಿಗೆ । ಮನಸಿಜಾರಿ ಹರ ಪಶುಪತಿಗೆ॥ ಸನಕ ಸನಂದನ ಭಕ್ತಾನತನಿಗೆ । ತನುವರ್ಧವ ಸತಿಗಿತ್ತವಗೆ ॥ ಮಂಗಲಂ ॥ ೧ ॥ ಸುರಪತಿ ವಂದಿತ ಚರಣನಿಗೆ । ಕರಿ

ಚರ್ಮಾಂಬರನಾದವಗೆ ॥ ಸಿರಿಯನು ಭಕ್ತರಿಗೀವ ಮಹೇಶಗೆ । ಗರಲವ ಗಲದಲಿ ಧರಿಸಿಹಗೆ ॥ ಮಂಗಲಂ ॥ ೨ ॥ ವೇದ್ಯನು ವೇದಚತುಷ್ಟಯಗೆ । ಹೃದ್ಯನಾದ ಗಿರಿಜಾಪತಿಗೆ ॥ ಸದ್ಯೋಜಾತಾದಿಗಳಿಂದೆಸೆವಗೆ । ಪದ್ಮಾಣದ ಮಹಲಿಂಗನಿಗೆ ॥ ಮಂಗಲಂ ॥ ೩ ॥ ಶ್ರೀಃ ಶ್ರೀಃ ಶ್ರೀಃ ॥

ಅಂತು ಸಂಧಿ ೧ಕ್ಕಂ ಪದ ೩೭೮ಕ್ಕಂ

ಮಂಗಳಮಸ್ತು.

ಯಕ್ಷಗಾನ ಸೌದಾಸ ಚರಿತ್ರೆ ಸಂಪೂರ್ಣವಾದುದು.

॥ ಇತಿ ಶಂ ॥

ಒಪ್ಪೋಲೆ

	ಪುಟ	ಸಾಲು	ತಪ್ಪು	ಒಪ್ಪು
ಮುನ್ನುಡಿ	೧	೧೨	ಸಂಜಿನಿಸುವ	ಸಂಜನಿಸುವ
ಬಿನ್ನಹದಲ್ಲಿ	೧	೧೧	ಸನ್ಮಾರ್ಗದರ್ಶನ ಪೂರ್ವಕವಾದ	ಇದು ಬೇಡ
	೧	೧೨	ಪರಿಷ್ಕಾರವಾದ	ಪರಿಷ್ಕಾರಕವಾದ
	೨	೫೦	ಕೃಜ್ಞನಾಗಿದ್ದೇನೆ	ಕೃತಜ್ಞನಾಗಿದ್ದೇನೆ
ಪ್ರಸಂಗದ	೩	೧೬	ಕೇರಿ	ಕೇಕಿ
	೪	೧೩	ಪಣದಿಕುವರಿಯು	ವಿಜಯತರುಣಿಯು
	೧೧	೬	ಅರುಹ	ಅರುಹು
	೧೩	೨೨	ಮೋದದಿ	ಮೋದಿದ
	೧೪	೧೩	ಮೋಲೆಂಥ	ಮೋಲಿಂಥ
	೧೮	೧೫	ಗುರುಸೇವಾವೃತಿ	ಗುರುಸೇವಾವ್ರತಿ
	೩೭	೧೫	ಬೊಂತೊಯು	ಬೊಂತೆಯು
	೩೮	೬	ಧರ್ಮವಿಹೀನವಾಗಿಹ	ಧರ್ಮಾವಿಹೀನವಾಗಿಹ
	೩೯	೨೨	ದೇಲಂತಬೆಟ್ಟೇಶ್ವರನು	ದೇಲಂತಬೆಟ್ಟೇಶ್ವರನು

ಮಹನೀಯರ ಅಭಿಪ್ರಾಯಗಳು

‘ಸೌದಾಸ ಚರಿತ್ರೆ’ಯು ಪ್ರಪ್ರಥಮವಾಗಿ ಮೂಲ್ಕಿ ಮೇಳದವರಿಂದ ರಂಗಭೂಮಿಯಲ್ಲಿ ಪ್ರಯೋಗವಾಗುವ ಪುಣ್ಯಪ್ರಸ್ತದಲ್ಲಿ ನಾನೇ ಭಾಗವತನಾಗಿದ್ದೆ. ಕುಶಲನಾದ ಭಾಗವತನು ಬೇರೆಬೇರೆ ರಾಗಗಳಲ್ಲಿ, ತಾಳಗಳಲ್ಲಿ ಹಾಡುವಂತೆ, ನಟರು ಸಾಧ್ಯವಿರುವಷ್ಟು ಅಭಿನಯ, ಹಾವಭಾವ, ಕುಣಿತಗಳ ಮೂಲಕ ನಟಿಸುವಂತೆ ಸ್ವಾರಸ್ಯಪೂರ್ಣವಾಗಿ ವಿವಿಧ ಛಂದಸ್ಸುಗಳಲ್ಲಿ ಪದ್ಯರಚನೆಯಾಗಿದೆ. ಕೆಲವೆಡೆಗಳಲ್ಲಿನ ವರ್ಣನಾವೈಖರಿ ಮನೋಜ್ಞವಾಗಿದೆ. ವನವರ್ಣನೆ ವಿಶೇಷತೆಗೆ ಎಡೆಗೊಟ್ಟರೂ ಆ ಭಾಗ ಸಹೃದಯರಿಗೆ ವಾಚನೀಯವೂ ನಟರಿಗೆ ಅಭಿನಯಪೂರ್ವಕ ನಲಿಯಲು ಯೋಗ್ಯವೂ ಆಗಿದೆ. ಈ ಕೃತಿ ಅಚ್ಚಾಗುವ ಮೊದಲೇ ಪ್ರದರ್ಶನದ ಭಾಗ್ಯವನ್ನು ಪಡೆದು ಪ್ರಶಸ್ತಿಯನ್ನೂ ಪಡೆದಿದೆ ಎನ್ನುವಾಗ, ಆಮೂಲಾಗ್ರ, ಈ ಕೃತಿಯನ್ನು ಚೆನ್ನಾಗಿ ಅವಲೋಕಿಸುವವರು ಓದಿದ ಉತ್ತರಕ್ಷಣದಲ್ಲಿ ‘ಇದು ಒಳ್ಳೆಯ ಪ್ರಸಂಗ’ ಎಂಬ ಉದ್ಗಾರವನ್ನು ತೆಗೆಯುವಲ್ಲಿ ಅನುಮಾನವಿಲ್ಲ.

ಕುಮಟಾ, ೧೭-೮-೫೮ — ಮಂಜುನಾಥ ಭಾಗವತ, ಕಡತೋಕಾ

‘ಸೌದಾಸ ಚರಿತೆ’ ಓದಿದೆ. ಪರ್ವತ, ನದಿ ಇತ್ಯಾದಿ ವರ್ಣನೆಗಳು ವಿದ್ವಜ್ಜನರ ಗಮನ ಸೆಳೆಯಬಲ್ಲವು. ಪ್ರಾಸ ಸಮರ್ಪಕವಾಗಿದೆ. ಸಂವಾದ ಪರವಾಗಿಲ್ಲ. ಆದರೆ ರಾಜ-ರಾಣಿಯರ ಪುನರ್ಮಿಲನದ ಭಾಗವು ಹೆಚ್ಚು ತೃಪ್ತಿಕರವಾಗಿಲ್ಲ. ಈಗಿನ ಕ್ರಮದಂತೆ ಪ್ರದರ್ಶನದ ದೃಷ್ಟಿಯಲ್ಲಿ ಪದ್ಯಗಳು ಸ್ವಲ್ಪ ಕಡಿಮೆಯಾಗಿದ್ದರೆ ಉತ್ತಮವಿತ್ತು. ವೀರರಸಪ್ರಧಾನವಾದ ಈ ಕೃತಿ ‘ತಾಳಮದ್ದಳೆ’ಗಿಂತಲೂ ಬಯಲಾಟಕ್ಕೆ ಉತ್ತಮ. ಒಟ್ಟಿನಲ್ಲಿ ಇದು ಸ್ವಾಗತಾರ್ಹ. ಇದರ ಲೇಖಕರಿಂದ ಇನ್ನೂ ಉತ್ತಮ ಕೃತಿಗಳನ್ನು ಯಕ್ಷಗಾನ ಕಲಾಭಿಮಾನಿಗಳು ಬಯಸುತ್ತಾರೆ. ಅವರಿಗೆ ಆ ಶಕ್ತಿಯನ್ನು ವೀಣಾಪಾಣಿಯು ಅನುಗ್ರಹಿಸಲಿ ಎಂದು ಹಾರೈಸುವೆ.

ಕುರ್ಯ, ೧೧-೮-೫೮ — ಕೆ. ವಿಠಲ ಶಾಸ್ತ್ರಿ

‘ಸೌದಾಸ ಚರಿತ್ರೆ’ಯು ಜಾನಪದ ಕಲಾಪ್ರಕಾರಕ್ಕೆ ಸೇರಿದ ಯಕ್ಷಗಾನಕ್ಕೆ ವಿದ್ವತ್ಪೂರ್ಣವಾದ ನೂತನ ಕಾಣಿಕೆ. ಭಾಗವತಾಂತರ್ಗತವಾದ ಈ ಕಥೆಯನ್ನು ಸುಂದರ ಯಕ್ಷಗಾನ ಪ್ರಬಂಧವಾಗಿ ಚಿತ್ರಿಸಲಾಗಿದೆ. ಕಥಾರಚನೆಯು ರಸಪರಿಪುಷ್ಟಿಗನುಕೂಲವಾಗಿ ಮನೋರಂಜಕವಾಗಿದೆ. ಅಲಂಕಾರಸಂಪತ್ತು, ಗುಣಸಾಂದ್ರತೆ, ಸುಲಲಿತ ಶೈಲಿಗಳಿಂದ ಈ ರಚನೆಯು ಮನೋಹರವಾಗಿದೆ. ನೂತನ ಭಾವನೆಗಳು ಸಹೃದಯಹೃದಯವನ್ನು ಸೆರೆಗೊಳ್ಳಬಲ್ಲವು. ರಚಯಿತರ ಕಾವ್ಯಾಭ್ಯಾಸಪಾಟವವು ಅಭಿವ್ಯಕ್ತವಾಗುತ್ತದೆ. ಯಕ್ಷಗಾನ ರಂಗದಲ್ಲಿ ಈ ಕೃತಿಯು ಪ್ರಯುಕ್ತವಾಗಿ ಯಶಸ್ವಿಯೆನಿಸಿದೆ. ತಾಳಮದ
ಇದನ್ನು ಬಳಸಬಹುದು. ಸಂಗ್ರಾಮಗಳು ಅಲ್ಲಲ್ಲಿ ಬಂದರೂ, ನಾನಾ
ಹಾಗೂ ಕಾವ್ಯಗುಣಗಳು ಕೂಡಿರುವುದರಿಂದ ಕೇವಲ ಅರ್ಥಗಾರಿಕೆಯ
ಜನಮನೋರಂಜನೆಯ ಸಗಬಹುದಾಗಿದೆ.

ಕನ್ಯಾನ, ೬-೯-೫೮ — ಎಸ್. ಭೀಮ ಭಟ